


**ವಾರ್ಷಿಕ ಸಂಚಿಕೆ**

ಸಂಪುಟ : 01 ಸಂಚಿಕೆ : 05 2020-21

## ಭಾಷಾ ಸಂಘದ ಸಹಯೋಗದೊಂದಿಗೆ



# ಲೇಖನಗಳ ಸಂಗ್ರಹ



ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ), ಶಿಕಾರಿಪುರ

## ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ

(ಅನುದಾನಿತ, ಕುವೆಂಪು ವಿಶ್ವವಿದ್ಯಾಲಯಕ್ಕೆ ಶಾಶ್ವತ ಸಂಯೋಜಿತ ಮತ್ತು ಎನ್.ಸಿ.ಟಿ.ಇ, ಯು.ಜಿ.ಸಿ ಅಧಿನಿಯಮ 2 (f),ಸೆಕ್ಷನ್ 12 (B) ಮನ್ನಣೆ ಪಡೆದಿದೆ. ಹಾಗೂ ನ್ಯಾಕ್‌ನಿಂದ ಸಿ.ಜಿ.ಪಿ.ಎ 2.70 ಅಂಕಗಳೊಂದಿದೆ B ಗ್ರೇಡ್ ಮಾನ್ಯತೆ ಹೊಂದಿದೆ.

ಶಿವಮೊಗ್ಗ ರಸ್ತೆ, ಶಿಕಾರಿಪುರ – 577 427, ಶಿವಮೊಗ್ಗ ಜಿಲ್ಲೆ

☎ : 08187 – 222383, 222067 ಮಿಂಚಂಚೆ: kumadvathibed@gmail.com

## ಭಾಷಾ ಸಂಘದ ಸದಸ್ಯರುಗಳು


ಚೈತ್ರ ಬಿ.ಕೆ


ಗಂಗಮ್ಮ


ಹನುಮಗೌಡ


ಕಲಾಶ್ರೀ ಎಸ್.ಬಿ


ಕನ್ನಿಕಾ ಎಂ.ಎಸ್


ಕಾವ್ಯ ವಿ


ಕಿರಣ್ ಕುಮಾರ್


ಸಲ್ಮಾಬಾನು


ಸಂಗೀತ


ಶಶಿಕುಮಾರ ಕೆ.ಸಿ


ಸೌಮ್ಯ ಬಿ


ವಿಜಯ ಕುಮಾರ


ಅಕ್ಷತಾ ಎನ್.ಬಿ


ಅರ್ಪಿತ ಟಿ.ಕೆ


ಅಶ್ವಿನಿ ಟಿ.ಕೆ


ಮಾಲಾ ಎಂ


ಮೇಘನಾ ವಿ


ರಶ್ಮಿ ಎಂ


ಸಾಕಮ್ಮ


ಶೃತಿ ಡಿ.ಬಿ


ಅರ್ಪಿತ ಟಿ.ಕೆ

ಸಿರಿಗನ್ನಡಂಗೆಲ್ಗೆ ಸಿರಿಗನ್ನಡಂಬಾಳ್ಗೆ



**ಚಿಗುರು**
ವಾರ್ಷಿಕ ಸಂಚಿಕೆ
ಡಿಸೆಂಬರ್ 2020-21
ಸಂಪುಟ : 01 ಸಂಚಿಕೆ : 05

**ಅಧ್ಯಕ್ಷರು**

**ಡಾ. ಜಯಶ್ರೀ ವಿ. ಆರ್**
ಪ್ರಾಚಾರ್ಯರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಪ್ರಧಾನ ಸಂಪಾದಕರು :**

**ಡಾ. ವೀರೇಂದ್ರ ಕುಮಾರ ವಾಲಿ ಎಸ್.,**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಡಾ. ರವಿ ಹೆಚ್.,**
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

**ಸಹ ಸಂಪಾದಕರು :**

ಭಾಷಾ ಸಂಘದ ಸರ್ವಸದಸ್ಯರು.

**ಚಿಗುರು**
**ವಾರ್ಷಿಕ ಸಂಚಿಕೆ**
**ಭಾಷಾ ಸಂಘ**
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ,
ಶಿಕಾರಿಪುರ 577427
ಫೋನ್ : 08187 – 222067
Email :
kumadvathibed@gmail.com

# ಪರಿವಿಡಿ


| ಕ್ರಮ ಸಂಖ್ಯೆ | ಸಂಗತಿಗಳು | ಪುಟ ಸಂಖ್ಯೆ |
|---|---|---|
| 01 | ಕರ್ನಾಟಕ ರತ್ನ ಪ್ರಶಸ್ತಿ | 1-2 |
| 02 | ಪದ್ಮಭೂಷಣ, ಕರ್ನಾಟಕ ರತ್ನ, ಧರ್ಮಾಧಿಕಾರಿಯಾಗಿ ಡಾ. ವೀರೇಂದ್ರ ಹೆಗ್ಗಡೆ | 3-6 |
| 03 | ತ್ರಿವಿಧ ದಾಸೋಹಿ, ಶತಾಯುಷಿ, ನಡೆದಾಡುವ ದೇವರು, ಕರ್ನಾಟಕ ರತ್ನ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ | 6-11 |
| 04 | ಮನುಷ್ಯನ ದೇಹದಲ್ಲೇನಿದೆ? ಆ ಕುರಿತೊಂದು ಮಾಹಿತಿ | 12-13 |
| 05 | ಮಕರ ಸಂಕ್ರಾಂತಿಯ ವಿಶೇಷತೆಗಳು | 13-16 |
| 06 | ಕಲಬುರಗಿಯಲ್ಲಿ ಕಳೆಗಟ್ಟಿದ 85ನೇ ಕನ್ನಡ ಸಾಹಿತ್ಯ ಸಮ್ಮೇಳನದ ವರದಿ | 16-18 |
| 07 | ದೇಶದ ಮೊದಲ ಆಟಿಕೆ ವಲಯ-ಕಿನ್ನಾಳ | 19-20 |
| 08 | ಬಸವಣ್ಣನವರ ಬದುಕು ಮತ್ತು ಸಾಧನೆ | 20-21 |
| 09 | ಅಲ್ಲಮಪ್ರಭುವಿನ ವಚನ ವಿಶಿಷ್ಟತೆ | 22-23 |
| 10 | ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಸ್ವರಚಿತ ಕವನವಾಚನ ಸ್ಪರ್ಧೆಯಲ್ಲಿ ಭಾಗವಹಿಸಿದ ಪ್ರೌಢಶಾಲಾ ವಿದ್ಯಾರ್ಥಿಗಳಿಂದ ರಚಿತವಾದ ಕವನಗಳು | 24-29 |
| 11 | ಭಾಷಾಸಂಘದ ಅಡಿಯಲ್ಲಿ ಕೈಗೊಳ್ಳಲಾದ ಆನ್‌ಲೈನ್ ರಸಪ್ರಶ್ನೆ, ರಾಜ್ಯಮಟ್ಟದ ರಸಪ್ರಶ್ನೆ ಹಾಗೂ ಪ್ರಬಂಧ ಸ್ಪರ್ಧೆ ಕಾರ್ಯಕ್ರಮಗಳ ಲಿಂಕ್‌ಗಳು | 30 |

# ಕರ್ನಾಟಕ ರತ್ನ ಪ್ರಶಸ್ತಿ

**ಕರ್ನಾಟಕ ರತ್ನ** ಕರ್ನಾಟಕ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿ. ಈ ಪ್ರಶಸ್ತಿಯನ್ನು ಯಾವುದೇ ಕ್ಷೇತ್ರದಲ್ಲಿ ಅಸಾಧಾರಣ ಕೊಡುಗೆಯನ್ನು ನೀಡಿದ ವ್ಯಕ್ತಿಗಳಿಗೆ ನೀಡಲಾಗುತ್ತದೆ. ಈ ಪ್ರಶಸ್ತಿಯನ್ನು 1992ರಲ್ಲಿ ಪ್ರಾರಂಭಿಸಲಾಯಿತು.

ಇದುವರೆಗೆ **ಎಂಟು ವ್ಯಕ್ತಿ**ಗಳಿಗೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

| ಕ್ರ.ಸಂ | ಪ್ರಶಸ್ತಿ ಪಡೆದವರ ಹೆಸರು | ಪ್ರಶಸ್ತಿ ಪಡೆದ ವರ್ಷ | ಪ್ರಶಸ್ತಿ ನೀಡಿದ ಕ್ಷೇತ್ರ |
|---|---|---|---|
| 01 | ರಾಷ್ಟ್ರಕವಿ ಕುವೆಂಪು  | 1992 | ಸಾಹಿತ್ಯ |
| 02 | ಡಾ. ರಾಜಕುಮಾರ್  | 1992 | ಚಲನಚಿತ್ರ |
| 03 | ಎಸ್. ನಿಜಲಿಂಗಪ್ಪ  | 1999 | ರಾಜಕೀಯ |
| 04 | ಸಿ. ಎನ್. ಆರ್. ರಾವ್  | 2000 | ವಿಜ್ಞಾನ |
| 05 | ಭೀಮಸೇನ ಜೋಷಿ  | 2005 | ಸಂಗೀತ |

| | | | |
|---|---|---|---|
| 06 | ಶ್ರೀ ಶಿವಕುಮಾರ ಸ್ವಾಮಿಗಳು  | 2007 | ಸಾಮಾಜಿಕ ಸೇವೆ |
| 07 | ದೇ. ಜವರೇಗೌಡ  | 2008 | ಸಾಹಿತ್ಯ |
| 08 | ಡಿ. ವೀರೇಂದ್ರ ಹೆಗ್ಗಡೆ  | 2009 | ಸಾಮಾಜಿಕ ಸೇವೆ |

**ಸೌಮ್ಯ ಬಿ**
**ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ**

# ಪದ್ಮಭೂಷಣ, ಕರ್ನಾಟಕ ರತ್ನ, ಧರ್ಮಾಧಿಕಾರಿಯಾಗಿ ಡಾ. ವೀರೇಂದ್ರ ಹೆಗ್ಗಡೆ

ವೀರೇಂದ್ರ ಹೆಗ್ಗಡೆಯವರು ಧರ್ಮಧಿಕಾರಿ ರತ್ನವರ್ಮ ಹೆಗ್ಗಡೆ ಮತ್ತು ರತ್ನಮ್ಮ ಹೆಗ್ಗಡೆ ಅವರು ಹಿರಿಯ ಮಗನಾಗಿ ನವೆಂಬರ್ 25 1948ರಲ್ಲಿ ಜನಿಸಿದರು. ಇವರು ಪೇರ್ಗಡೆ ರಾಜವಂಶಕ್ಕೆ ಸೇರಿದ್ದು ತುಳು ಪರಂಪರೆ ಪ್ರಸಿದ್ಧ ಶ್ರೀವಂಶಪಾರಂಪರ್ಯ ಟ್ರಸ್ಟ್‌ಗಳು ದಕ್ಷಿಣ ಕನ್ನಡ ಜಿಲ್ಲೆಯ ಜೈನ್ ಬಂಟ್ ಸಮುದಾಯದವರು, ಇವರಿಗೆ ಮೂವರು ಕಿರಿಯ ಸಹೋದರರು. ಹರ್ಷೇಂದ್ರ ಕುಮಾರ್, ಸುರೇಂದ್ರಕುಮಾರ್ ಮತ್ತು ರಾಜೇಂದ್ರಕುಮಾರ್ ಮತ್ತು ಪದ್ಮಲತಾ ಎಂಬ ಸಹೋದರಿ ಇದ್ದಾರೆ. ವೀರೇಂದ್ರ ಹೆಗ್ಗಡೆಯವರು, ಹೇಮಾವತಿ ಹೆಗ್ಗಡೆ ಅವರನ್ನು ವಿವಾಹವಾದರು. ಇವರ ಮಗಳು ಶ್ರದ್ಧಾ, ಹಿರಿಯ ಮಗನಾಗಿ ವೀರೇಂದ್ರ ಹೆಗ್ಗಡೆಯವರು ತಮ್ಮ ತಂದೆಯ ನಂತರ ಧರ್ಮಧಿಕಾರಿಯಾಗಿ ಬಂದರು

**ಕೊಡುಗೆಗಳು:**

**ಭಾರತೀಯ ಸಂಸ್ಕೃತಿಗೆ ಹೆಗ್ಗಡೆಯವರ ಕೊಡುಗೆಗಳು**

- ಅವರು ಕತೆ ಮತ್ರು ಸಾಹಿತ್ಯ ಪೋಷಕರಗಿದ್ದಾರೆ
- ಅವರು ಪ್ರಕಟಣೆ ಸರಣಿ ಮತ್ತು ಮಂಜುವಾಣಿ ಎಂಬ ಮಾಸಿಕ ಜರ್ನಲ್‌ನ್ನು ಪ್ರಕಟಿಸಿರುತ್ತಾರೆ
- ಶುದ್ಧ ಸಾಂಪ್ರದಾಯಿಕ ವಿಧಾನವನ್ನು ಕಾಪಾಡಿಕೊಳ್ಳುವ ಮೂಲಕ ಅವರು ಯಕ್ಷಗಾನ ಪುನರುಜ್ಜಿವನಕ್ಕೆ ಸಹಕರಿಸಿದರು
- ಪ್ರಕೃತಿಚಿಕಿತ್ಸೆ, ಯೋಗ ಮತ್ತು ನೈತಿಕ ಶಿಕ್ಷಣವನ್ನು ಪ್ರಚಾರ ಮಾಡಲು ಫ್ರೌಢಶಾಲೆಗಳ 400 ಶಿಕ್ಷಕರು ಪ್ರತಿ ವರ್ಷ30.000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಯೋಗ, ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣದಲ್ಲಿ ತರಬೇತಿ ನೀಡುತ್ತಾರೆ.
- ಮಂಜಷಾ ವಸ್ತು ಸಂಗ್ರಹಾಲಯವಾಗಿದ್ದು ಅದು ಅಪರೂಪದ ಪ್ರಾಚೀನ ಸಂಗ್ರಹಗಳು ಮತ್ತು ಸಮಕಾಲಿನ ಅಪರೂಪದ ಮತ್ತು ಅಮೂಲ್ಯವಾದ ಸಂಗ್ರಹಗಳನ್ನು ಪ್ರದಶಿಸಿತ್ತದೆ. ಈ ಮ್ಯೂಸಿಯಂಗೆ ಜೋಡಿಸಲಾಗಿದ ವಿಂಚೇಜಾಕಾರ್ ಮ್ಯೂಸಿಯಂನಲ್ಲಿ ಅನೇಕ ರಾಷ್ಟ್ರಗಳ ವಾಹನಗಳು ಇವೆ.
- 4000 ತಾಳೆ–ಎಲೆಗಳ ಹಸ್ತಪ್ರತಿಗಳು ಸಂರಕ್ಷಿಸಲಾಗಿದೆ ಮತ್ತು ವಿದ್ವಾಂಸರು ಶ್ರೀ ಮಂಜುನಾಥೇಶ್ವರ ಸಂಸ್ಕ್ರತ ಸಂಶೋಧನ ಪ್ರತಿಸ್ಥಾನಕ್ಕೋಸ್ಕರ ಸಂಶೋಧನೆ ನಡೆಸುತ್ತಾರೆ.

**ಸಮಾಜ ಕಲ್ಯಾಣದ ಕಾರ್ಯದಲ್ಲಿ ತೊಡಗಿಕೊಂಡ ಹೆಗ್ಗಡೆಯವರು.**

- 1972 ರಿಂದ ಪ್ರತಿವರ್ಷ ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಉಚಿತ ಸಾಮೂಹಿಕ ವಿವಾಹವನ್ನು ಅರಂಭಿಸಿದರು, ಏಪ್ರಿಲ್–2004ರ ವೇಳೆಗೆ 10000 ದಂಪತಿಗಳು ಈ ಯೋಜನೆಯಡಿಯಲ್ಲಿ ವಿವಾಹವಾಗಿದ್ದರು.
- ಮಧ್ಯಮ ಮತ್ತು ಕಡಿಮೆ ಆದಾಯದ ಜನರು ಅನುಕೂಲಕ್ಕಾಗಿ ಅವರು ಬೆಂಗಳೂರು ಕಲ್ಲಹಳ್ಳಿ, ಭದ್ರಾವತಿ, ಮೈಸೂರು ಶ್ರವಣಬೆಳಗೊಳ ಮತ್ತು ಬಂಟ್ವಾಳದಲ್ಲಿ ಮದುವೆ ಮಂಟಪಗಳನ್ನು ನಿರ್ಮಿಸಿದರು.
- ಅವರು 600 ಗ್ರಾಮಗಳು ಮತ್ತು ಆರು ನಗರ ಪಟ್ಟಣಗಳನ್ನು ಒಳಗೊಂಡ ಕರ್ನಾಟಕದ ಕರಾವಳಿ ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆಯನ್ನು ಪರಿಚಯಿಸಿದರು. ಕೃಷಿಯಲ್ಲಿ 13.50.000 ಕುಟುಂಬಗಳ ಸಬಲೀಕರಣ, ವಸತಿ, ಪಯಾಯ ಶಕ್ತಿಯ ಮೂಲಗಳು ಆದಾಯ ಉತ್ಪಾದಿಸುವ ಚಟುವಡಿಕೆ ಸೂಕ್ಷ್ಮ ಹಣಕಾಸು, ಶಿಕ್ಷಣ ಮತ್ತು ಆರೋಗ್ಯ ಯೋಜನೆಗಳು ಈ ಯೋಜನೆಗೆ ಅನುಕೂಲವಾಗಿದೆ.
- ಅವರು ಸೌರಶಕ್ತಿಯ ಮಹತ್ವವನ್ನು ಉತ್ತೇಜಿಸಿದ್ದಾರೆ ಮತ್ತು ಹಲವಾರು ಹಳ್ಳಿಗಳಿಗೆ ಸೌಲಭ್ಯಗಳನ್ನು ಒದಗಿಸಿದ್ದಾರೆ.
- ಅವರು 1982ರಲ್ಲಿ ಸಿಂಡಿಕೇಟ್ ಬ್ಯಾಂಕ್. ಸಿಂಡಿಕೇಟ್ ಅಗ್ರಿಕಲ್ಚರ್ ಫೌಂಡೇಶನ್ ಮತ್ತು ಕೆನಾರ ಬ್ಯಾಂಕ್ ಸಹಯೋಗದೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಸ್ವ–ಉದ್ಯೋಗ ತರಬೇತಿ ಸಂಸ್ಥೆಯನ್ನು ಸ್ಥಾಪಿಸಿದರು, ಗ್ರಾಮೀಣ ಯುವಕರಿಗೆ ಸ್ವ–ಉದ್ಯೋಗ್ಯಕ್ಕಾಗಿ ಸ್ವಯಂ ಸೇವಕರಿಗೆ 1952 ರಲ್ಲಿ ತರಬೇತಿ ನೀಡಿದರು ಅಂದಿನಿಂದ 20 ಶಾಖೆಗಳು ಭಾರತದಾದ್ಯಂತ ಹುಟ್ಟಿಕೊಂಡಿವೆ. ಜೂನ್ 2004 ರವರೆಗೆ 1.500.000 ಯುವಕರಿಗೆ ತರಬೇತಿ ನೀಡಲಾಗಿದೆ ಮತ್ತು ಉದ್ಯೋಗ ದರವು 65% ಆಗಿದೆ.
- ಸಿಂಡಿಕೇಟ್ ಬ್ಯಾಂಕ್‌ನ ವಜ್ರ ಮಹೋತ್ಸವವನ್ನು ಗುರುತಿಸಲು ಅವರು ಗ್ರಾಮೀಣ ಭಾರತರಿಯಲ್ ಇಂಡಿಯಾ ಸೇರಿದಂತೆ ರಾಷ್ಟ್ರಿಯ ಸೆಮಿನಾರ್‌ಗಳನ್ನು ಆಯೋಜಿಸಿದರು.

**ಶಿಕ್ಷಣಕ್ಕೆ ನೀಡಿದ ಕೊಡುಗೆ**

- ಅವರು ಉಜ್ಜೆರಿನ ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಸ್ನಾತಕೋತ್ತರ ಕೋರ್ಸನ್ನು ಕಾಲೇಜಾಗಿ ಪರಿವರ್ತಿಸಿದರು
- ಅವರು ಎಸ್.ಡಿ.ಎಂ.ಐ.ಎಂ. ಕಾಲೇಜು ಮೈಸೂರು ಪ್ರಾರಂಭಿಸಿದರು ಇದು ಭಾರತದ ಉನ್ನತ ಉದ್ಯಮ ಕಾಲೇಜಾಗಿ ವಿಕಸನಗೊಂಡಿತು ಕೃಷಿ, ತೋಟಗಾರಿಕೆ, ಹೈನುಗಾರಿಕೆ ಮತ್ತು ಭವಿಷ್ಯದ

ರೈತರು ಮತ್ತು ನಾಗರಿಕರ ಪರೋಕುಪನೆಯೊಂದಿಗೆ ಉಜ್ಜೆರ್‌ನಲ್ಲಿ ಫ್ರೌಢಶಾಲಾ ಬಾಲಕರಿಗೆ ರತ್ನ ಮಾನಸ ಎಂಬ ಹಾಸ್ಟೇಲ್ ಪ್ರಾರಂಭಿಸಿದರು.

- ಕೃಷಿ ನೈತಿಕ ಶಿಕ್ಷಣ ಮತ್ತು ನಾಯಕತ್ವ ಕಾರ್ಯಕ್ರಮಗಳಲ್ಲಿ ತರಬೇತಿಯನ್ನು ವಿದ್ಯಾರ್ಥಿಗಳಿಗೆ ಪ್ರೇರೇಪಿಸುವ ಸಲುವಾಗಿ ಅವರು ಉಜಿರೆಯ ಕಾಲೇಜಿನ ವಿದ್ಯಾರ್ಥಿಗಳಿಗೆ ಮಾದರಿ ಹಾಸ್ಟೆಲ್ ಆಗಿದ್ದ ಶ್ರೀಸಿದ್ದವನ ಗುರುಕುಲವನ್ನು ಪ್ರಾರಂಭಿಸಿದರು.
- ಅವರು ಪ್ರಾಥಮಿಕದಿಂದ ಎಂಜಿನಿಯರಿಂಗ್ ವೈದ್ಯಕೀಯ, ಆಯುರ್ವೇದ ಮತ್ತು ನಿರ್ವಹಣ ಸಂಸ್ಥೆಗಳು ಮತ್ತು ಅಸ್ಪತ್ರೆಗಳವರೆಗೆ ಶಿಕ್ಷಣ ಸಂಸ್ಥೆಳನ್ನು ನಿರ್ವಹಿಸುವ ಉಜ್ಜೆರ್‌ನಎಸ್, ಡಿ, ಎಂ ಎಜುಕೇಷನಲ್ ಸೊಸೈಟಿಯ ಅಧ್ಯಕ್ಷರಾಗಿದ್ದಾರೆ.

**ಪ್ರಶಸ್ತಿಗಳು ಮತ್ತು ಗೌರವಗಳು**

- ಸಾಮಾಜಿಕ ಕಾರ್ಯಕ್ಕಾಗಿ ಪದ್ಮಭೂಷಣ ಪ್ರಶಸ್ತಿ ಮತ್ತು ಕೋಮು ಸಾಮರಸ್ಯ ಪ್ರಶಸ್ತಿ ಲಭಿಸಿದವು.
- 1993 ರಲ್ಲಿ ಭಾತರದಅಧ್ಯಲ್ಷಡಾ. ಶಂಕದಯಾಳ್ ಶರ್ಮ ಅವರಿಂದ ರಾಜರ್ಷಿಪ್ರಶಸ್ತಿ
- ರಾಜ್ಯಸರ್ಕಾರ 2009ರಲ್ಲಿ ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ
- ಅಂದಿನ ಭಾರತದ ಪ್ರಧಾನಮಂತ್ರಿ ಪಿ,ವಿ,ನರಸಿಂಹರಾವ್ ಅವರು ಮೆ–12–1995 ರಂದುಎಸ್.ಕೆ.ಡಿ.ಆರ್.ಪಿ.ಯಿಂದ ಬೆಲ್ತಂಗಡಿ ತಾಲ್ಲೂಕಿನಲ್ಲಿ ಗ್ರಾಮೀಭಿವೃದ್ದಿ ಚಟುವಟಿಕೆಗಳಿಗಾಗಿ ಫೆಡರೇಶನ್ಆಫ್ಇಂಡಿಯನ್ ಚೇಂಬರ್ಸ್ಆಫ್ಕಾಮರ್ಸ ಪ್ರಶಸ್ತಿಯನ್ನು ಪ್ರಧಾನ ಮಾಡಿದರು.
- ಭಾರತದ ಮಾಜಿ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು 20ನವೆಂಬರ 1999 ರಂದು ರುಡ್ಸೆಟ್ ಇಸ್ಸಿಟ್ಯೂಟ್ನಂದ ಗ್ರಾಮೀಣಾಭಿವೃದ್ಧಿ ಮತ್ತು ಸ್ವ–ಉದ್ಯೋಗ್ಯ ಚಟುವಟಿಕೆಗಳಿಗಾಗಿ "ಫೆಡರೇಶನ್ ಆಪ್ ಇಂಡಿಯನ್ ಚೇಂಬರ್ಸ ಆಫ್ಕಾಮರ್ಸ್" ಪ್ರಶಸ್ತಿಯನ್ನು ಪ್ರಧಾನ ಮಾಡಿದರು
- 20 ನವೆಂಬರ್–2004 ರಂದು ಹಾಸನದಲ್ಲಿ ಇ,ಟಿ,ವಿ ಕನ್ನಡ ಅವರಿಂದ "ವಾಚಿಕಾ ವರ್ಷದ ಕನ್ನಡಿಗ–2004 "
- ಸಾಮಾಜಿ ಕಾರ್ಯಗಳಿಗಾಗಿ ಭಾರತ ಸರ್ಕಾರದಿಂದ "ಪದ್ಮಭೂಷಣ್" ಪ್ರಶಸ್ತಿ ದೊರೆತಿದೆ.
- ಜೀಕನ್ನಡ ವಾಹಿನಿಯ ಹೆಮ್ಮೆಯ ಕನ್ನಡಿಗ–2019 ಜೀವಮಾನ ಸಾಧಕರು ಪ್ರಶಸ್ತಿಗಳು ಲಭಿಸಿವೆ

ಒಟ್ಟಾರೆಯಾಗಿ ಶ್ರೀಯುತ ಡಾ.ವೀರೇಂದ್ರ ಹೆಗ್ಗಡೆಯವರುತಮ್ಮ ಸಾಮಾಜಿಕಕಾರ್ಯ ಮತ್ತು ಧರ್ಮಧಿಕಾರಿ ಸ್ಥಾನದ ನಿರ್ವಹಣೆಯಲ್ಲಿ ವಿಶಿಷ್ಟವಾದ ಛಾಪು ಮೂಡಿಸಿದ್ದಾರೆ. ಕರ್ನಾಟಕದ ಹೆಮ್ಮೆಯಾಗಿರುವ ಇವರು ಹಲವಾರು ಮಹಿಳಾ ಸಂಘಗಳಿಗೆ ಆಧಾರವಾಗಿದ್ದಾರೆ. ಧರ್ಮ, ಜಾತಿಗಳನ್ನೆಲ್ಲ

ಮೀರಿದ ಮಾನವೀಯ ಗುಣಗಳಿಂದ ಗುರುತಿಸಿಕೊಂಡ ಇವರ ಅಪಾರ ಸೇವೆಗೆ ಹಲವಾರು ಪ್ರಶಸ್ತಿಗಳು ಅರಸಿ ಬಂದಿವೆ. ಇದು ಅವರ ಶ್ರೇಷ್ಠ ಕಾರ್ಯಗಳನ್ನು ಎತ್ತಿ ತೋರಿಸುವ ಸಂಗತಿಯಾಗಿದೆ. ಇವರು ಸಾಮಾಜಿಕ ಕಾಳಜಿ ಸಾಂಸ್ಕೃತಿಕ ಪರಂಪರೆಯ ರಕ್ಷಣೆಯ ಕಾರ್ಯಗಳು ಹೀಗೆ ಹತ್ತು ಹಲವಾರು ಜವಾಬ್ದಾರಿಗಳನ್ನ ನಿರ್ವಹಿಸುತ್ತಿರುವ ಡಾ.ವೀರೇಂದ್ರ ಹೆಗ್ಗಡೆಯವರು ಮನುಕುಲಕ್ಕೆ ಮಾದರಿಯಾಗಿದ್ದಾರೆ. ಇಂತಹ ಆದರ್ಶಗುಣಗಳನ್ನು ಹೊಂದಿರುವ ಹೆಗ್ಗಡೆಯವರ ಜೀವನ ಮನುಷ್ಯ ಜನ್ಮದ ಮಾದರಿ ನುಡಿದಂತೆ ನಡೆಯುವ, ಹಾಗೆಯೇ ಅದರಂತೆ ನಡೆಯುವ ಗುಣಗಳನ್ನು ಮಾನವರಾದ ನಾವು ಅಳವಡಿಸಿಕೊಳ್ಳಬೇಕಾಗಿದೆ.

**ಡಾ. ವೀರೇಂದ್ರ ಕುಮಾರ ವಾಲಿ. ಎಸ್**
**ಸಹಾಯಕ ಪ್ರಾಧ್ಯಾಪಕರು**

## ತ್ರಿವಿಧ ದಾಸೋಹಿ, ಶತಾಯುಷಿ, ನಡೆದಾಡುವ ದೇವರು, ಕರ್ನಾಟಕ ರತ್ನ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ

ಶಿವಕುಮಾರ ಸ್ವಾಮಿ ಒಬ್ಬ ಭಾರತೀಯ ಆಧ್ಯಾತ್ಮಿಕ ನಾಯಕ, ಮಾನವೀಯ ಮತ್ತು ಶಿಕ್ಷಣತಜ್ಞ, ಅವರು ಹಿಂದೂ ಲಿಂಗಾಯತ ಧಾರ್ಮಿಕ ವ್ಯಕ್ತಿಯಾಗಿದ್ದರು ಮತ್ತು ಕರ್ನಾಟಕದ ಸಿದ್ದಗಂಗಾ ಮಠದ ಮಠಾಧಿಪತಿಗಳಾಗಿದ್ದರು. ಅವರು ಶ್ರೀ ಸಿದ್ದಗಂಗ ಎಜುಕೇಶನ್ ಸೊಸೈಟಿಯನ್ನು ಸ್ಥಾಪಿಸಿದರು. ಹಿಂದೂಧರ್ಮದ ಲಿಂಗಾಯತ ಸಂಪ್ರದಾಯದ ಅತ್ಯಂತ ಗೌರವಾನ್ವಿತ ಅನುಯಾಯಿಯಾಗಿದ್ದರು. ಅವರನ್ನು ರಾಜ್ಯದಲ್ಲಿ ನಡೆದಾಡುವ ದೇವರು ಎಂದು ಕೂಡ ಉಲ್ಲೇಖಿಸಲಾಗಿದೆ. ಭಾರತದಲ್ಲಿ ವಾಸಿಸುತ್ತಿದ್ದ ಅತಿ ಪುರಾತನ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಅವರಿಗೆ ಭಾರತ ಸರ್ಕಾರವು 2015 ರಲ್ಲಿ ಭಾರತದ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಇವರು ತ್ರಿವಿಧ (ಅನ್ನ, ಅಕ್ಷರ ಮತ್ತು ಜ್ಞಾನ) ದಾಸೋಹಿ. 12ನೇ ಶತಮಾನದ ಯುಗಪುರುಷ ಕ್ರಾಂತಿಕಾರಿ ಬಸವಣ್ಣನವರ "ಕಾಯಕವೇ ಕೈಲಾಸ" ಮತ್ತು “ನಿತ್ಯ ದಾಸೋಹ ತತ್ವ”ದ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಶ್ರೀಗಳು. ಮಾರ್ಚ್ 3, 1930ರಲ್ಲಿ ಇವರು ಶ್ರೀಮಠದ ಜವಾಬ್ದಾರಿಯನ್ನು ಹೊತ್ತು ಅಂದಿನಿಂದ ನಿರಂತರವಾಗಿ ಮಠ, ಯಾವುದೋ ಒಂದು ಧರ್ಮಕ್ಕೆ ಸ್ಥೀಮಿತವಾಗದೆ ಎಲ್ಲ ಧರ್ಮಗಳ ಮತ್ತು ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿದ್ದರು.

ದೇಶ ಮತ್ತು ಸಮಾಜದ ಪ್ರಗತಿಯ ಬಗ್ಗೆ ಕಳಕಳಿಯಿರುವ ಸ್ವಾಮೀಜಿಯವರು ಮುಂದಿನ ಪೀಳಿಗೆಯ ಬೆಳವಣಿಗೆಗಾಗಿ ಪಣತೊಟ್ಟಿದ್ದರು. ಇವರು ಸಮಾಜದ ಎಷ್ಟೋ ಗಣ್ಯರ ಬಾಲ್ಯ ಜೀವನಗಳ

ಪರಿವರ್ತನೆಗೆ ಕಾರಣವಾಗಿದ್ದಾರೆ. ತಮ್ಮ ಮಠದಲ್ಲಿ ಹತ್ತು ಸಾವಿರ ವಿದ್ಯಾರ್ಥಿಗಳಿಗೆ ಆಶ್ರಯವನಿತ್ತು ತ್ರಿವಿಧ ದಾಸೋಹವನ್ನು ಸತತವಾಗಿ ನಡೆಸುತ್ತಾ ಬಂದಿದ್ದರು.

**ಶ್ರೀಗಳ ಪೂರ್ವಾಶ್ರಮ:**

ಮಾಗಡಿ ತಾಲೂಕಿನ ವೀರಾಪುರದ ಶ್ರೀಯುತ ಹೊನ್ನೇಗೌಡ ಮತ್ತು ತಾಯಿ ಗಂಗಮ್ಮನವರಿಗೆ ಎಪ್ರಿಲ್ 1, 1908ರಲ್ಲಿ 13ನೇ ಮಗನಾಗಿ ಶಿವಣ್ಣ ಜನಿಸಿದರು. ಎಲ್ಲರಿಗಿಂತಲೂ ಕಿರಿಯರಾದ ಶಿವಣ್ಣನವರೆಂದರೆ ತಂದೆ ತಾಯಿಗಳಿಗೆ ಅಪಾರ ಪ್ರೀತಿ. ವೀರಾಪುರದಲ್ಲಿಯೇ ಇದ್ದ ಕೂಲಿಮಠದಲ್ಲಿ ಮರಳಿನ ಮೇಲೆ ಅಕ್ಷರ ತಿದ್ದುವ ಮೂಲಕ ಶಿವಣ್ಣನ ಶೈಕ್ಷಣಿಕ ಜೀವನ ಆರಂಭವಾಯಿತು. ಅನಂತರ ಪ್ರಾಥಮಿಕ ಶಾಲೆಗಾಗಿ ಪಕ್ಕದ ಊರಾದ ಪಾಲನಹಳ್ಳಿಯ ಶಾಲೆಗೆ ದಾಖಲಾದರು. ತಮ್ಮ ಪ್ರಾಥಮಿಕ ಶಾಲಾ ದಿನಗಳಲ್ಲಿ ತಾಯಿಯನ್ನು ಕಳೆದುಕೊಂಡ ಶಿವಣ್ಣ ಅನಂತರ ಅಕ್ಕನ ಆಸರೆಯಲ್ಲಿ ಬೆಳೆದರು. ತುಮಕೂರು ಬಳಿ ಇರುವ ನಾಗವಲ್ಲಿಯಲ್ಲಿ ಮಾಧ್ಯಮಿಕ ಶಿಕ್ಷಣದ ನಂತರ 1922ರಿಂದ ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ 1926ರಲ್ಲಿ ಮೆಟ್ರಿಕ್ಯುಲೇಷನ್ ಗಳಿಸಿದರು. 1927ರಲ್ಲಿ ಆಗಿನ ಸಿದ್ದಗಂಗಾ ಮಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಉದ್ದಾನ ಶಿವಯೋಗಿಗಳವರೊಡನೆ ಒಡನಾಟ ಆಯಿತು. ಇದೇ ವರ್ಷ ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿದರು. ಬೆಂಗಳೂರಿನಲ್ಲಿ ರಾವ್ ಬಹದ್ದೂರ್ ಧರ್ಮಪ್ರವರ್ತ ಶ್ರೀ ಗುಬ್ಬಿ ತೋಟದಪ್ಪ ಧರ್ಮ ಛತ್ರದಲ್ಲಿ ಉಳಿದುಕೊಂಡು, ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದರು. ವಿದ್ಯಾಭ್ಯಾಸದೊಂದಿಗೆ ಸಿದ್ದಗಂಗಾ ಮಠದ ಒಡನಾಟದಲ್ಲಿದ್ದರು. ಹಿರಿಯ ಗುರುಗಳಾದ ಶ್ರೀ ಉದ್ಧಾನ ಸ್ವಾಮಿಜಿಗಳ ಹಾಗೂ ಆಗ ಕಿರಿಯ ಶ್ರೀಗಳಾಗಿದ್ದ ಮರುಳಾರಾಧ್ಯರ ಸಂಗ ಶಿವಣ್ಣನವರಿಗೆ ಒಂದು ಹಿತಾನುಭೂತಿ ನೀಡುತ್ತಿತು. ಶಿವಣ್ಣನವರು ಎಲ್ಲ ಸಮಯಗಳಲ್ಲೂ ಮಠದ ಹಿತವನ್ನು ಬಯಸುತ್ತ ಮಠಕ್ಕೆ ಭೇಟಿಕೊಡುತಿದ್ದರು. ತುಮಕೂರು ಜಿಲ್ಲೆಯಲ್ಲಿ ಭೀಕರ ಪ್ಲೇಗ್ ರೋಗ ಇದ್ದರು ಶಿವಣ್ಣನವರ ಹಾಗೂ ಮಠದ ಒಡನಾಟ ಎಂದಿನತೆಯೇ ಇತ್ತು.

**ಮಠಾಧಿಪತಿಯಾಗಿ ಶ್ರೀಗಳು:**

ಶ್ರೀರಕ್ಷೆಯಿಂದ ಉತ್ತಮವಾಗಿ ನಡೆಯುತ್ತಿದ್ದ ಸಿದ್ದಗಂಗಾ ಮಠಕ್ಕೆ 1930ರಲ್ಲಿ ಉದ್ದಾನ ಶಿವಯೋಗಿಗಳ ಕಿರಿಯ ಶ್ರೀಗಳಾಗಿದ್ದ ಮರುಳಾರಾಧ್ಯರು ಆಕಸ್ಮಿಕವಾಗಿ ಶಿವೈಕ್ಯರಾದರು. ಆಗ ಅವರ ಕ್ರಿಯಾ ಸಮಾಧಿ ಕಾರ್ಯಕ್ಕೆ ಆಗಮಿಸಿದ್ದ ಶಿವಣ್ಣನರನ್ನು ಉದ್ಧಾನ ಸ್ವಾಮಿಜಿಗಳು ಎಲ್ಲರ ಸಮ್ಮುಖದಲ್ಲಿ ಮಠದ ಉತ್ತರಾಧಿಕಾರಿ ಎಂದು ಘೋಷಿಸಿದರು. ನಂತರ ಕಾವಿ, ರುದ್ರಾಕ್ಷಿಗಳನ್ನು ಧರಿಸಿದ ಸನ್ಯಾಸಿಯಾಗಿ, ಸನ್ಯಾಸತ್ವ ಸ್ವೀಕಾರದ ನಂತರವೂ ವಿದ್ಯಾಭ್ಯಾಸ ಮುಂದುವರಿಸಿದ ಶಿವಣ್ಣನವರು ಬೆಂಗಳೂರಿಗೆ ಬಂದು

ಸನ್ಯಾಸತ್ವದ ರೀತಿ ರಿವಾಜು ಪಾಲಿಸುತ್ತಾ ವಿದ್ಯಾಭ್ಯಾಸ ಮುಗಿಸಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ಸಿದ್ದಗಂಗಾ ಮಠಕ್ಕೆ ಹಿಂದಿರುಗಿದರು, ನಂತರ ತಮ್ಮ ಪೂರ್ಣ ಸಮಯವನ್ನು ಮಠದ ಏಳಿಗೆಗಾಗಿ ಮೀಸಲಿಡುತ್ತಾರೆ. ನಂತರ ಶ್ರೀ ಉದ್ಧಾನ ಶಿವಯೋಗಿಗಳು ಶಿವೈಕ್ಯರಾದಾಗ ಮಠದ ಸಕಲ ಆಡಳಿತ, ಮಠದ ವಿದ್ಯಾರ್ಥಿಗಳ, ಶಿಕ್ಷಣ ಸಂಸ್ಥೆಗಳ ಯೋಗ ಕ್ಷೇಮದ ಜವಾಬ್ದಾರಿಯೂ ಶ್ರೀಗಳವರಿಗೆ ಹಸ್ತಾಂತರವಾಗುತ್ತದೆ.

**ಶ್ರೀಯವರ ಮಠಾಧಿಕಾರದ ಆರಂಭದ ದಿನಗಳು:**

ಶ್ರೀಗಳು ಮಠದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡ ಸಂಧರ್ಭದಲ್ಲಿ ಮಠದ ಆದಾಯ ತುಂಬಾ ಕಡಿಮೆ ಇತ್ತು. ಮಠಕ್ಕೆಂದು ಮೀಸಲಾಗಿದ್ದ ಜಮೀನಿನಲ್ಲಿ ಬೆಳೆದು ವಿಧ್ಯಾರ್ಥಿಗಳ ಸನಿವಾಸ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು ಕಷ್ಟದಾಯಕವಾಗಿತ್ತು. ಮಠದ ಭೂಮಿಯೆಲ್ಲ ಮಳೆಯಾಧಾರಿತವಾದದ್ದು ಮತ್ತು ತೊಡಕಾಗಿ ಅತಿವೃಷ್ಟಿ, ಅನಾವೃಷ್ಟಿಗಳಂತಹ ಸಮಯದಲ್ಲಿ ಬಹಳ ಕಷ್ಟವಾಗುತ್ತಿತ್ತು. ಇದನ್ನೆಲ್ಲಾ ಧೈರ್ಯವಾಗಿ ಮೆಟ್ಟಿ ನಿಂತ ಶ್ರೀಗಳು ಭಕ್ತರ ಮನೆಗೆ ಭಿನ್ನಹವೇ ಮೊದಲಾದ ಆದ್ಯತೆಗಳ ಮೇರೆಗೆ ನಡೆದುಕೊಂಡೇ ಹೋಗಿ ಅಲ್ಲಿಂದ ಧವಸ ಧಾನ್ಯಗಳನ್ನು ತಂದಿದ್ದೂ ಉಂಟು. ಬರಿಯ ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯಷ್ಟೇ ಅಲ್ಲದೆ ದಿನ ನಿತ್ಯ ಮಠದಲ್ಲಿ ನಡೆಯಬೇಕಾದ ಧಾರ್ಮಿಕ ಕಾರ್ಯಗಳು, ಮಠಕ್ಕೆ ಭಕ್ತರ ಹಾಗೂ ಗಣ್ಯರ ಭೇಟಿ, ಮಠದ ಅರ್ಥಿಕ ನಿರ್ವಹಣೆಗಳೂ ಸೇರಿ ಶ್ರೀಗಳಿಗೆ ಬಿಡುವಿಲ್ಲದ ಕಾರ್ಯ ಪಟ್ಟಿಯೇ ಇರುತ್ತಿತ್ತು. ಆರಂಭದ ದಿನಗಳಲ್ಲಿ 'ಶ್ರೀಗಳು ಇವನ್ನೆಲ್ಲ ನಿಭಾಯಿಸಲು ಸಾಧ್ಯವಿಲ್ಲ' ಎಂಬ ಆಡು ನುಡಿಗಳೂ ಕೇಳಿಬಂದಿದ್ದವು. ಇದ್ಯಾವುದಕ್ಕೂ ಧೃತಿಗೆಡದ ಶ್ರೀಗಳು ಪೂಜ್ಯ ಲಿಂಗೈಕ್ಯ॥ ಶ್ರೀ ಅಟವೀ ಸ್ವಾಮಿಗಳ ಹಾಗೂ ಲಿಂಗೈಕ್ಯ॥ ಶ್ರೀ ಉದ್ಧಾನ ಸ್ವಾಮಿಗಳ ಆಶಯದಂತೆ ಯಾವುದೇ ತೊಡಕುಗಳಾಗದಂತೆ ಮಠದ ಶಿಕ್ಷಣ ಸಂಸ್ಥೆಗಳನ್ನು, ವಿದ್ಯಾರ್ಥಿ ನಿಲಯಗಳನ್ನು, ಪ್ರಸಾದ ನಿಲಯಗಳನ್ನು ಸಮರ್ಥವಾಗಿ ಮುನ್ನಡೆಸುತ್ತಾರೆ.

**ಶ್ರೀಗಳ ದಿನಚರಿ:**

ಪ್ರತಿದಿನವೂ ಶ್ರೀಗಳು ಬೆಳಗಿನ ನಾಲ್ಕು ಗಂಟೆಗೆ ಎದ್ದು ಸ್ನಾನಮಾಡಿ, ಪೂಜಾಕೋಣೆಯಲ್ಲಿ ಒಂದು ತಾಸಿಗೂ ಹೆಚ್ಚು ಸಮಯ ಧ್ಯಾನದಲ್ಲಿ ತಲ್ಲೀನರಾಗುತ್ತಿದ್ದರು. ನಂತರ ಇಷ್ಟಲಿಂಗ ಪೂಜೆ. ದೂರದಿಂದ ಸ್ವಾಮಿಗಳ ದರ್ಶನಕ್ಕಾಗಿ ಬರುವ ಭಕ್ತರಿಗೆ ಭಸ್ಮವನ್ನು ಕೊಟ್ಟು ತಾವೂ ಧರಿಸಿ, ಪೂಜೆಯನ್ನು ಮುಗಿಸುತ್ತಿದ್ದರು. ನಂತರ ಅವರ ಆಹಾರ ಸೇವನೆ ಮುಂಜಾನೆ ಆರೂವರೆ ಗಂಟೆಗೆ. ಒಂದು ಅಕ್ಕಿ–ಇಡ್ಲಿ, ಸ್ವಲ್ಪ ಹೆಸರುಬೇಳೆ–ತೊವ್ವೆ, 'ಸಿಹಿ' ಹಾಗೂ 'ಖಾರ ಚಟ್ನಿ' ಸೇವನೆ. ಎರಡು ತುಂಡು ಸೇಬು. ಇದರ ಬಳಿಕ, 'ಬೇವಿನ–ಚಕ್ಕೆ ಕಷಾಯ' ಸೇವನೆ ಮಾಡುತ್ತಿದ್ದರು.

**ಪ್ರತಿದಿನದ ಪ್ರಾರ್ಥನೆ:**

ಮುಂಜಾನೆ ಮತ್ತು ಸಂಜೆ ಮಠದ ಆವರಣದಲ್ಲಿ ಮಕ್ಕಳಿಂದ ನಡೆಯುವ ಪ್ರಾರ್ಥನೆಯಲ್ಲಿ ಶ್ರೀಗಳು ಪಾಲ್ಗೊಳ್ಳುತ್ತಿದ್ದರು. ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಹಿಡಿದು ಪದವಿ ಅಭ್ಯಾಸದಲ್ಲಿರುವ ತರುಣರ ವರೆಗೂ ಸಾವಿರಾರು ಮಂದಿ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವುದನ್ನು ನೋಡಲು ಕಣ್ಣುಗಳು ಪುಣ್ಯ ಮಾಡಿರಬೇಕು. ಮಠದ ಆವರಣದಲ್ಲಿರುವ ವಿಧ್ಯಾರ್ಥಿ ನಿಲಯದ ಮುಂದಿರುವ ವಿಶಾಲವಾದ ಬಯಲಿನಲ್ಲಿ ಸಾವಿರಾರು ಜನ ಒಟ್ಟಿಗೆ ಪ್ರಾರ್ಥನೆ ಮಾಡುವುದನ್ನು ನೋಡುವುದೂ ಸಿದ್ಧಗಂಗೆಯ ಒಂದು ಪ್ರಮುಖ ಆಕರ್ಷಣೆ. ಪ್ರಾರ್ಥನೆಯ ನಂತರ ಕಛೇರಿಗೆ ಧಾವಿಸುವ ಶ್ರೀಗಳು ದಿನ ಪತ್ರಿಕೆಗಳನ್ನು ಓದುತ್ತಿದ್ದರು. ಅಲ್ಲಿಗೆ ಬಂದ ಭಕ್ತರಿಗೆ, ದರ್ಶನಾರ್ಥಿಗಳಿಗೆ ದರ್ಶನ ನೀಡುತ್ತಿದ್ದರು. ಮಳೆ-ಬೆಳೆ, ಕುಶಲೋಪರಿ ವಿಚಾರ, ಗಣ್ಯರ ಭೇಟಿ, ಮಠದ ಆಡಳಿತ ಕಡತಗಳ ಪರಿಶೀಲನೆ, ಪತ್ರವ್ಯವಹಾರಗಳೇ ಮುಂತಾಗಿ ಹಲವಾರು ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರಲ್ಲದೆ ಇಳಿವಯಸ್ಸಿನಲ್ಲೂ ಧಣಿವರಿಯದೇ ಕಾರ್ಯನಿರತರಾಗಿ "ಕಾಯಕವೇ ಕೈಲಾಸ" ಎಂದು ನುಡಿಯಲ್ಲಿ ಮಾತ್ರ ಹೇಳದೆ ಹಾಗೆಯೇ ನಡೆಯಲ್ಲೂ ತೋರಿಸಿಕೊಟ್ಟಿದ್ದಾರೆ.

ಮಠದ ಪ್ರಸಾದ ನಿಲಯದ ಮುಂಭಾಗದ ಮಂಚದ ಮೇಲೆ ಆಸೀನರಾಗುತ್ತಿದ್ದರು. ಭಕ್ತರ ಕಷ್ಟ-ಸುಖಕ್ಕೆ ಸ್ಪಂದನ, ಮಧ್ಯಾಹ್ನ ಮೂರು ಗಂಟೆಯವರೆಗೆ ನಿರಂತರವಾಗಿ ಸಾಗುತ್ತಿತ್ತು. ಮಠಕ್ಕೆ ಭೇಟಿ ಕೊಡುವ ಬಹುತೇಕ ಭಕ್ತರು ರೈತಾಪಿ ವರ್ಗದವರಾದ್ದರಿಂದ ಶ್ರೀಗಳು ಬೇರೆ ಬೇರೆ ಪ್ರದೇಶದಿಂದ ಬಂದ ರೈತರಲ್ಲಿ ಮಳೆ ಬೆಳೆಗಳ ಬಗ್ಗೆ ಪ್ರಶ್ನಿಸುತ್ತಿದ್ದರು. ಇದರ ಬಳಿಕ ಶ್ರೀಗಳು, ನೇರವಾಗಿ ಮಠಕ್ಕೆ ಸಾಗಿ, ಸ್ನಾನ ಪೂಜೆಗಳಲ್ಲಿ ಮಗ್ನರಾಗುತ್ತಿದ್ದರು. ಇದರ ಬಳಿಕ ಒಂದು ಸಣ್ಣ ಗಾತ್ರದ ಮುದ್ದೆ, ಸ್ವಲ್ಪವೇ ಅನ್ನ, ಮತ್ತು ತೊಗರಿಬೇಳೆ ಸಾಂಬಾರ್ ಊಟಮಾಡುತ್ತಿದ್ದರು. ಸಂಜೆ 4 ಗಂಟೆಯ ನಂತರ ಪುನಃ ಭಕ್ತಗಣದ ಬೇಟಿ. ಮಠದಲ್ಲಿ ಉಳಿದುಕೊಂಡು ವಿದ್ಯಾರ್ಜನೆ ಮಾಡುವ ಮಕ್ಕಳ ಕುಶಲೋಪರಿ, ದಾಸೋಹದ ಮಾಹಿತಿ ಸುಮಾರು ರಾತ್ರಿ 9 ಗಂಟೆಯವರೆವಿಗೂ ನಡೆಯುತ್ತಿತ್ತು.

**ಶ್ರೀಗಳು ವಿಶ್ರಾಂತಿ ಪಡೆಯುವ ರೀತಿ:**

ರಾತ್ರಿ ಹತ್ತೂವರೆಗೆ ಸ್ವಾಮೀಜಿ ಮಲಗುವ ವೇಳೆ ಪುಸ್ತಕ ಓದಿ ಮಲಗುವ ಹವ್ಯಾಸವಿಟ್ಟುಕೊಂಡಿದ್ದರು. ಇದು ಕನಿಷ್ಠ ಅರ್ಧತಾಸಾದರೂ ನಡೆಯುತ್ತಿತ್ತು. ಹನ್ನೊಂದು ಗಂಟೆಗೆ ಮಲಗುತ್ತಿದ್ದರು. ಓದಿನೊಂದಿಗೆ ಆರಂಭವಾಗುವ ಶ್ರೀಗಳ ದಿನಚರಿ ಓದಿನೊಂದಿಗೆ ಮುಕ್ತಾಯವಾಗುತ್ತಿತ್ತು. ಕೆಲವು ದಿನಗಳಲ್ಲಿ ಹಲವಾರು ಧಾರ್ಮಿಕ ಸಮಾರಂಭಗಳಲ್ಲಿ ಪಾಲ್ಗೊಳ್ಳುತ್ತಿದ್ದರು, ಆಹ್ವಾನಿಸುವ ಭಕ್ತರ ಮನೆಗಳಿಗೂ ಭೇಟಿನೀಡುತ್ತಿದ್ದರು. ದೂರದ ಊರುಗಳಿಗೂ ಓಡಾಡುತ್ತಿದ್ದರು. ಪ್ರಸಾದ ಸ್ವೀಕರಿಸುವ

ವೇಳೆಯಲ್ಲಿ ಮಾತ್ರ ಬಿಸಿನೀರು ಸೇವಿಸುತ್ತಿದ್ದರು. ಬಾಕಿ ಸಂದರ್ಭದಲ್ಲಿ ಏನನ್ನೂ ಸೇವಿಸುತ್ತಿರಲಿಲ್ಲ. ಕಳೆದ 8 ದಶಕಗಳ ಜೀವನ ಇದೇರೀತಿ ಸಾಗಿತು. ಶ್ರೀಗಳ ಆರೋಗ್ಯವೂ ಚೆನ್ನಾಗಿಯೇ ಇತ್ತು. ಶ್ರೀಗಳವರ ಮೇಲೆ ಒಂದು ಸಾಕ್ಷ್ಯಚಿತ್ರವನ್ನು ಕೂಡ ತಯಾರಿಸಲಾಗಿದೆ.

**ಸ್ವಾಮೀಜಿಯವರು ಕೈಗೊಂಡ ಸಾಮಾಜಿಕ ಕಾರ್ಯಗಳು:**

ಅವರು ಶಿಕ್ಷಣ ಮತ್ತು ತರಬೇತಿಗಾಗಿ ಒಟ್ಟು 132 ಸಂಸ್ಥೆಗಳನ್ನು ಸ್ಥಾಪಿಸಿದರು, ನರ್ಸರಿಯಿಂದ ಎಂಜಿನಿಯರಿಂಗ್, ವಿಜ್ಞಾನ, ಕಲೆ ಮತ್ತು ನಿರ್ವಹಣೆ ಜೊತೆಗೆ ವೃತ್ತಿಪರ ತರಬೇತಿಯೂ ಸಹ ಇದೆ. ಅವರು ಸಂಸ್ಕೃತದ ಸಾಂಪ್ರದಾಯಿಕ ಕಲಿಕೆಯಲ್ಲಿ ಆಧುನಿಕ ಶಿಕ್ಷಣ ಮತ್ತು ತಂತ್ರಜ್ಞಾನದಲ್ಲಿ ಶಿಕ್ಷಣ ನೀಡುವ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿದರು. ಅವರ ಪರೋಪಕಾರಿ ಕೆಲಸಕ್ಕಾಗಿ ಅವರು ಎಲ್ಲಾ ಸಮುದಾಯಗಳಿಂದ ವ್ಯಾಪಕವಾಗಿ ಗೌರವಿಸಲ್ಪಟ್ಟರು. ಸ್ವಾಮಿ ಅವರ ಮಠದಲ್ಲಿ 10000 ಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿದೆ. 5 ವಯಸ್ಸಿನಿಂದ 16 ವರ್ಷ ವಯಸ್ಸಿನ ಯಾವುದೇ ಹಂತದಲ್ಲಿ ಮತ್ತು ಉಚಿತ ಆಹಾರ, ಶಿಕ್ಷಣ ಮತ್ತು ಆಶ್ರಯ (ತ್ರಿವಿಧ ದಾಸೋಹ) ಅನ್ನು ಒದಗಿಸುವ ಎಲ್ಲ ಧರ್ಮ, ಜಾತಿ ನೋಡದೆ ಎಲ್ಲಾ ಮಕ್ಕಳಿಗೆ ತೆರೆದಿರುತ್ತದೆ. ಮಠದ ಯಾತ್ರಾರ್ಥಿಗಳು ಮತ್ತು ಸಂದರ್ಶಕರು ಕೂಡಾ ಉಚಿತ ಊಟದ ವ್ಯವಸ್ಥೆ ಇದೆ. ಮಠಾಧೀಶ ಮಾರ್ಗದರ್ಶನದಲ್ಲಿ, ವಾರ್ಷಿಕ ಕೃಷಿ ಜಾತ್ರೆಯನ್ನು ಸ್ಥಳೀಯ ಜನಸಂಖ್ಯೆಯ ಅನುಕೂಲಕ್ಕಾಗಿ ನಡೆಸಲಾಗುತ್ತದೆ. ಕರ್ನಾಟಕ ಸರಕಾರವು 2007 ರಿಂದ ಶಿವಕುಮಾರ ಸ್ವಾಮೀಜಿ ಪ್ರಶಸ್ತಿಯನ್ನು ಸ್ವಾಮೀಜಿಯ ಶತಮಾನೋತ್ಸವದ ವಾರ್ಷಿಕೋತ್ಸವವನ್ನು ಘೋಷಿಸಿತು. ಭಾರತದ ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತುಮಕೂರಿಗೆ ಭೇಟಿ ನೀಡಿದರು ಮತ್ತು ಶಿಕ್ಷಣ ಮತ್ತು ಮಾನವೀಯ ಕೆಲಸದಲ್ಲಿ ಸ್ವಾಮಿಯ ಉಪಕ್ರಮಗಳನ್ನು ಶ್ಲಾಘಿಸಿದರು.

**ಶ್ರೀಗಳಿಗೆ ಸಂದ ಪ್ರಶಸ್ತಿಗಳು**

- ❖ ಸ್ವಾಮೀಜಿಯವರ ಜಾತ್ಯಾತೀತ, ಧರ್ಮಾತೀತ ಶಿಕ್ಷಣ ಸೇವೆಯನ್ನು ಪರಿಗಣಿಸಿ ಕರ್ನಾಟಕ ವಿಶ್ವವಿದ್ಯಾಲಯವು ಶ್ರೀಗಳಿಗೆ 1965ರಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.
- ❖ ಪೂಜ್ಯ ಸ್ವಾಮೀಜಿಯವರ 100ನೆ ವರ್ಷದ ಹುಟ್ಟುಹಬ್ಬ ಮತ್ತು ಕರ್ನಾಟಕ ಸುವರ್ಣ ಮಹೋತ್ಸವ ಸಮಯದಲ್ಲಿ ಶ್ರೀಗಳ ಜೀವಮಾನ ಸಮಾಜ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರ ರಾಜ್ಯದ ಮಹೋನ್ನತ ಪ್ರಶಸ್ತಿಯಾದ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.
- ❖ 2015ರಲ್ಲಿ ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

2017 ರಲ್ಲಿ, ಕರ್ನಾಟಕ ಸರಕಾರ ಮತ್ತು ಅವರ ಭಕ್ತರು ಸ್ವಾಮೀಜಿಯವರ ಸಾಮಾಜಿಕ ಸೇವೆಗಾಗಿ ಅವರಿಗೆ ಭಾರತ ರತ್ನ ನೀಡಲು ಮನವಿ. ಕರ್ನಾಟಕದ ಮುಖ್ಯಮಂತ್ರಿ ಎಚ್. ಡಿ. ಕುಮಾರಸ್ವಾಮಿ

ಸ್ವಾಮಿಜಿಯವರ ಮಾನವೀಯ ಕೆಲಸದ ಗುರುತಿಸುವಿಕೆಗಾಗಿ ಭಾರತ ರತ್ನವನ್ನು ನೀಡಲು ಕೇಂದ್ರ ಸರಕಾರವನ್ನು ಒತ್ತಾಯಿಸಿದ್ದರು.

**ಸ್ವಾಮೀಜಿಯವರ ಬಗ್ಗೆ ಜಿ.ಎಸ್.ಶಿವರುದ್ರಪ್ಪ**

ಸದ್ದು ಗದ್ದಲವಿರದ ಸಾಧನೆಯಿಲ್ಲಿ ಗದ್ದುಗೆಯೇರಿದೆ
ಕಾಯಕವೇ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ
ಕಾವಿಯುಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ
ಎಲ್ಲ ನನ್ನವರೆನ್ನುವ ಭಾವದ ಕರುಣೆಯೇ ಕಣ್ತೆರೆದಿದೆ. ಎಂದು ಹೇಳಿದ್ದಾರೆ.

**ಶತಾಯುಷಿ ಸ್ವಾಮೀಜಿಯ ನಿಧನ:**

ವಯೋಸಂಬಂಧಿ ಅನಾರೋಗ್ಯದಿಂದ ಬಳಲಿದ ಸ್ವಾಮೀಜಿಯವರನ್ನು ಹೃದಯಕ್ಕೆ ಸ್ಟಂಟ್ ಅಳವಡಿಸುವುದಕ್ಕೋಸ್ಕರ 2018ರ ಡಿಸೆಂಬರ್ ನಲ್ಲಿ ಚೆನ್ನೈನ ರೇಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದ ಸ್ವಾಮೀಜಿ ಮಠಕ್ಕೆ ಹಿಂದಿರುಗಿದ್ದರು. ಇದಾಗಿ ಕೆಲವೇ ದಿನಗಳಲ್ಲಿ ಶ್ವಾಸಕೋಶ ಸೋಂಕಿನಿಂದ ಬಳಲಿದ ಶ್ರೀಗಳನ್ನು ಮತ್ತೆ ತುಮಕೂರಿನ ಸಿದ್ಧಗಂಗಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅರೋಗ್ಯ ಸುಧಾರಿಸಿದ ಕಾರಣ ಸ್ವಾಮೀಜಿಯವರನ್ನು ಮಠಕ್ಕೆ ಹಿಂದಿರುಗಿ ಕರೆತರಲಾಗಿತ್ತು. 2019 ಜನವರಿ 21 ರಂದು ಬೆಳಗ್ಗೆ ರಕ್ತದೊತ್ತಡ ಏರುಪೇರಾಗಿ ಶ್ರೀಗಳು ಸಿದ್ಧಗಂಗಾದ ಹಳೆಯ ಮಠದಲ್ಲಿ ಕೊನೆಯುಸಿರೆಳೆದರು. ಅವರಿಗೆ 111 ವರ್ಷ ವಯಸ್ಸಾಗಿತ್ತು.

ಇಂತಹ ಮಹಾನ್ ವ್ಯಕ್ತಿಗಳು ಕೋಟಿಗಳಲ್ಲಿ ಒಬ್ಬರು. ಆದರೆ ಪ್ರಸ್ತುತ ಅನೇಕ ಸ್ವಾಮೀಜಿಗಳು ಜಾತಿ ಜಾತಿಗಳ ಪರವಾಗಿ ನಿಂತು ಇಂತಹ ಮೌಲ್ಯಯುತವಾಗಿ ಬಾಳಿ ಬದುಕಿ ಸಾಧಿಸಿದ ಸ್ವಾಮೀಜಿಗಳ ಹೆಸರಿಗೆ ಮಸಿ ಬಳಿಯುತ್ತಿರುವುದು ಖಂಡನೀಯವಾಗಿದೆ. ಮುಂದಾದರೂ ಬೇರೆ ಬೇರೆ ಧರ್ಮದ ಹೆಸರಿನೊಂದಿಗೆ ಗುರುತಿಸಿಕೊಂಡು ಸ್ವಾಮೀಜಿಗಳೆಂದು ಕರೆಸಿಕೊಳ್ಳುವವರೆಲ್ಲರೂ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರ ನಡೆ ಮತ್ತು ನುಡಿಯನ್ನು ಮಾದರಿಯಾಗಿರಿಸಿಕೊಂಡು ಸಮಾಜಕ್ಕೆ ಮಾರ್ಗದರ್ಶಕರಾಗಬೇಕು ಎಂಬ ಆಶಯವನ್ನು ವ್ಯಕ್ತ ಪಡಿಸುತ್ತೇನೆ.

**ಡಾ. ರವಿ ಹೆಚ್**
**ಸಹಾಯಕ ಪ್ರಾಧ್ಯಾಪಕರು**

## ಮನುಷ್ಯನ ದೇಹದಲ್ಲೇನಿದೆ? ಆ ಕುರಿತೊಂದು ಮಾಹಿತಿ

- ಮೂಳೆಗಳ ಸಂಖ್ಯೆ – 206
- ಸ್ನಾಯುಗಳ ಸಂಖ್ಯೆ – 639
- ಮೂತ್ರಪಿಂಡಗಳ ಸಂಖ್ಯೆ – 2
- ಹಾಲು ಹಲ್ಲುಗಳ ಸಂಖ್ಯೆ – 20
- ಪಕ್ಕೆಲುಬುಗಳ ಸಂಖ್ಯೆ – 24 (12 ಜೋಡಿಗಳು)
- ಹೃದಯದ ಕೋಣೆಗಳ ಸಂಖ್ಯೆ – 4
- ದೊಡ್ಡ ಅಪಧಮನಿ – ಮಹಾಪಧಮನಿಯ
- ಸಾಮಾನ್ಯ ರಕ್ತದೊತ್ತಡ – 120 – 80
- ರಕ್ತದ ಪಿಎಚ್ – 7.4
- ಬೆನ್ನುಮೂಳೆಯ ಬೆನ್ನುಹುರಿ ಸಂಖ್ಯೆ – 33
- ನೆಕ್ನಲ್ಲಿ ಬೆನ್ನುಹುರಿಯ ಸಂಖ್ಯೆ – 7
- ಮುಖದ ಮೂಳೆಗಳ ಸಂಖ್ಯೆ – 14
- ಸ್ಕಲ್ ಮೂಳೆಗಳು ಸಂಖ್ಯೆ – 22
- ಆರ್ಮ್ಸ್ ರಲ್ಲಿ ಮೂಳೆಗಳು ಸಂಖ್ಯೆ – 6
- ಪ್ರತಿ ಮನುಷ್ಯನ ಮೂಳೆಗಳ ಸಂಖ್ಯೆ ಕಿವಿ – 3
- ಮಾನವ ಸ್ನಾಯುಗಳ ಸಂಖ್ಯೆ ಆರ್ಮ್ – 72
- 2 – ಹೃದಯದಲ್ಲಿ ಪಂಪ್ಗಳ ಸಂಖ್ಯೆ
- ದೊಡ್ಡ ಆರ್ಗನ್ – ಸ್ಕಿನ್
- ದೊಡ್ಡ ಗ್ರಂಥಿ – ಯಕೃತ್ತು
- ಚಿಕ್ಕ ಕೋಶ – ರಕ್ತ ಕಣ
- ದೊಡ್ಡ ಕೋಶ – ಎಗ್ ಸೆಲ್ (ಅಂಡಾಮ್)
- ಚಿಕ್ಕ ಮೂಳೆ – ಸ್ಟಪ್ಸ್
- ಸಣ್ಣ ಕರುಳಿನ ಸರಾಸರಿ ಉದ್ದ – 7 ಮೀ
- ದೊಡ್ಡ ಕರುಳಿನ ಸರಾಸರಿ ಉದ್ದ – 1.5 ಮೀ
- ಹೊಸ ಜನನ ಸರಾಸರಿ ತೂಕ ಬೇಬಿ – 2.6 ಕೆಜಿ.
- ಒಂದು ನಿಮಿಷದಲ್ಲಿ ಪಲ್ಸ್ ದರ – 72 ಬಾರಿ
- ದೇಹದ ತಾಪಮಾನ – 36.9o [1] (98.4o ಎಫ್)
- ಸರಾಸರಿ ರಕ್ತ ಪರಿಮಾಣ – 4 – 5 ಲೀಟರ್
- ಆರ್ಬಿಸಿ ಸರಾಸರಿ ಜೀವನ – 120 ದಿನಗಳು
- ಮಾನವ ಕಾಲು ಮೂಳೆಗಳ ಸಂಖ್ಯೆ – 33
- ಪ್ರತಿ ಮಣಿಕಟ್ಟಿನಲ್ಲಿ ಎಲುಬುಗಳ ಸಂಖ್ಯೆ – 8

- ಕೈಯಲ್ಲಿ ಎಲುಬುಗಳ ಸಂಖ್ಯೆ – 27
- ಅತಿದೊಡ್ಡ ಅಂತಃಸ್ರಾವಕ ಗ್ರಂಥಿ – ಥೈರಾಯ್ಡ್
- ದೊಡ್ಡ ದುಗ್ಧರಸ ಅಂಗ – ಗುಲ್ಮ
- ಅತಿದೊಡ್ಡ ಸೆಲ್ – ನರ ಕೋಶ
- ಮೆದುಳಿನ ದೊಡ್ಡ ಭಾಗ – ಸೆರೆಬ್ರಮ್
- ದೊಡ್ಡದು & amp; ಬಲವಾದ ಮೂಳೆ – ಫೆಮೂರ್
- ಚಿಕ್ಕ ಸ್ನಾಯು - ಸ್ಟೇಪಡಿಯಸ್ (ಮಧ್ಯ ಕಿವಿ)
- ಮಾನವ ಜೀವಕೋಶದ ವರ್ಣತಂತುಗಳ ಸಂಖ್ಯೆ – 46 (23 ಜೋಡಿಗಳು)

**ಶಶಿಕುಮಾರ ಕೆ.ಸಿ**
**ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ**

## ಮಕರ ಸಂಕ್ರಾಂತಿಯ ವಿಶೇಷತೆಗಳು

ಸಂಕ್ರಾಂತಿ ಬಹಳ ವಿಶೇಷವಾದ ಪರ್ವಕಾಲ. ಈ ವರ್ಷ ಜನವರಿ 14 ರಂದು ಮಕರ ಸಂಕ್ರಮಣ ಜರುಗಿತು. ಶುಭ ಕಾರ್ಯಗಳನ್ನು ಮಾಡುವವರು ಸಾಮಾನ್ಯವಾಗಿ ಸಂಕ್ರಾಂತಿಯ ನಂತರ ಶುರು ಮಾಡುತ್ತಾರೆ. ಮತ್ತು ಹಲವು ಶುಭ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಈ ಸಮಯವನ್ನು ಎದುರು ನೋಡುತ್ತಾರೆ.

ರವಿ ಗ್ರಹವು ಮಕರ ರಾಶಿಯನ್ನು ಪ್ರವೇಶಿಸುವ ದಿನ ಮಕರ ಸಂಕ್ರಾಂತಿ ಎಂದು ಆಚರಿಸಲಾಗುತ್ತದೆ. ಅಲ್ಲಿಂದ ಮುಂದೆ ಕರ್ಕಾಟಕ ರಾಶಿಗೆ ರವಿ ಗ್ರಹ ಪ್ರವೇಶ ಮಾಡುವ ತನಕ ಮದುವೆ, ಉಪನಯನ ಮೊದಲಾದ ಶುಭ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಬಹಳ ಪ್ರಶಸ್ತವಾದ ಕಾಲ.

ಜನವರಿ 14 ರಂದು ಮಕರ ಸಂಕ್ರಾಂತಿಯನ್ನು ಆಚರಿಸಲು ಕಾರಣವೇನೆಂದರೆ, ಈ ವರ್ಷ ಮಕರ ರಾಶಿಗೆ ಗ್ರಹಗಳ ರಾಜನಾದ ಸೂರ್ಯನು ಜನವರಿ 14 ರಂದು ಗುರುವಾರ ಬೆಳಗ್ಗೆ 8.14 ಕ್ಕೆ ಸಂಚಾರವನ್ನು ಆರಂಭಿಸಿದನು.

ಆ ಗುರುವಾರ ಸಂಕ್ರಾಂತಿಯಿಂದಾಗಿ, ಇದನ್ನು ನಂದಾ ಮತ್ತು ನಕ್ಷತ್ರದ ಪ್ರಕಾರ ಮಹೋದರಿ ಸಂಕ್ರಾಂತಿ ಎಂದು ಪರಿಗಣಿಸಲಾಯಿತು,

ಈ ಸಂಕ್ರಾಂತಿಯ ಕಾಲವು ಬ್ರಾಹ್ಮಣರಿಗೆ, ಶಿಕ್ಷಕರಿಗೆ, ಬರಹಗಾರರಿಗೆ, ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿ ಮತ್ತು ಶುಭ ಕಾಲವೆಂದು ನಂಬಲಾಗಿದೆ. ಶಾಸ್ತ್ರಗಳ ಪ್ರಕಾರ ಸಂಕ್ರಾಂತಿಯ ಪುಣ್ಯ

ಕಾಲವು ಸಂಕ್ರಾಂತಿಗಿಂತಲೂ 6 ಗಂಟೆ 24 ನಿಮಿಷಗಳ ಮೊದಲು ಪ್ರಾರಂಭವಾಗುತ್ತದೆ ಎಂದು ಹೇಳುತ್ತದೆ. ಆದ್ದರಿಂದ ಮಕರ ಸಂಕ್ರಾಂತಿಯಂದು ಬ್ರಹ್ಮ ಮುಹೂರ್ತದಲ್ಲಿ ಸ್ನಾನವನ್ನು ಮಾಡಬೇಕು. ಈ ದಿನ ಸಂಕ್ರಾಂತಿಗೆ ಸಂಬಂಧಿಸಿದ ಧಾರ್ಮಿಕ ಚಟುವಟಿಕೆಗಳನ್ನು ಮಾಡಲು 2 ಗಂಟೆ 38 ನಿಮಷಗಳು ಉತ್ತಮವಾಗಿರುತ್ತದೆ. ಮಕರ ಸಂಕ್ರಾಂತಿ ದಿನದಂದು ಯಾವಾಗ ಬೇಕಾದರೂ ನದಿ ಸ್ನಾನ ಮಾಡಬಹುದು ಮತ್ತು ದಾನ ಮಾಡಬಹುದು.

ದಕ್ಷಿಣ ಭಾತರದಲ್ಲಿ ಪೊಂಗಲ್ ಜನಪ್ರಿಯ ಹಬ್ಬವಾಗಿದೆ. ಬದಲಾಗುತ್ತಿರುವ ರೀತಿ ನೀತಿಗಳು ಮತ್ತು ಸಂಪ್ರದಾಯಗಳೊಂದಿಗೆ ಈ ಹಬ್ಬದ ಸಂಭ್ರಮಾಚರಣೆಯು ಬಹುಕಾಲ ನೆನಪಿನಲ್ಲಿಳಿಯುತ್ತದೆ. ಸುಗ್ಗಿಯ ಕಾಲವಾದ್ದರಿಂದ, ಹೊಸ ಬೆಳೆಯನ್ನು ಸುಗ್ಗಿ ಮಾಡಲಾಗುತ್ತದೆ, ನಂತರ ಅದನ್ನು ಅಡುಗೆ ಮಾಡಿ ದೇವರಿಗೆ ಸಮರ್ಪಿಸಲಾಗುತ್ತದೆ. ಈ ಹಬ್ಬವನ್ನು ನಾಲ್ಕು ದಿನಗಳ ಕಾಲ ಆಚರಿಸಲಾಗುತ್ತದೆ. ಪೊಂಗಲ್‌ನ ಪ್ರತಿಯೊಂದು ದಿನವೂ ಅನನ್ಯ ಕಟ್ಟುಪಾಡುಗಳು ಮತ್ತು ಸಂಪ್ರದಾಯಗಳನ್ನು ತನ್ನೊಂದಿಗೆ ಮೈಗೂಡಿಸಿಕೊಂಡಿದೆ.

**ಸೂರ್ಯ ಪೂಜೆಯ ವಿಶೇಷ :**

ಪೊಂಗಲ್ ಹಬ್ಬದ ಮುಖ್ಯ ದೇವರು ಸೂರ್ಯ. ಎಲ್ಲಾ ಆಚರಣೆಗಳು ಸೂರ್ಯ ದೇವರನ್ನು ಪೂಜಿಸುವುದರ ಸುತ್ತ ಸುತ್ತಿಕೊಂಡಿದೆ. ಪೊಂಗಲ್‌ನಂದು ಮನೆಯ ಹೊರಗೆ ಸೂರ್ಯ ದೇವರನ್ನು ಪೂಜಿಸಲಾಗುತ್ತದೆ.

**ರಂಗೋಲಿ ಬಿಡಿಸುವುದರ ವಿಶೇಷ :**

ರಂಗೋಲಿ ಬಿಡಿಸುವುದಕ್ಕಾಗಿ ಸ್ವಚ್ಚವಾದ ಸ್ಥಳವನ್ನು ಆಯ್ಕೆ ಮಾಡಲಾಗುತ್ತದೆ. ನಂತರ ಸೂರ್ಯ ರಂಗೋಲಿಯನ್ನು ಬಿಡಿಸಲಾಗುತ್ತದೆ. ಬಿಳಿ ಹುಡಿಯಿಂದ ಈ ರಂಗೋಲಿಯನ್ನು ಬಿಡಿಸಲಾಗುತ್ತದೆ. ಸೂರ್ಯ ದೇವರ ಮುಖವನ್ನು ರಂಗೋಲಿಯಲ್ಲಿ ನಾವು ಕಾಣಬಹುದು. ನವಿಲು, ಕಬ್ಬು, ಬೇಯುತ್ತಿರುವ ಪೊಂಗಲ್ ಮತ್ತು ಈ ದಿನವನ್ನು, ಆಚರಣೆಯ ಮಹತ್ವವನ್ನು ಬಿಂಬಿಸುವ ರಂಗೋಲಿಯನ್ನು ಜನರು ಬಿಡಿಸುತ್ತಾರೆ.

**ಆಹಾರದ ವಿಶೇಷ :**

ಪೊಂಗಲ್ ಪೂಜೆಯಂದು ತಯಾರಿಸುವ ಆಹಾರ ಬಹು ಶ್ರೇಷ್ಠವಾದದ್ದು. ಈ ದಿನದಂದು ಆಹಾರವನ್ನು ಮನೆಯ ಹೊರಗೆ ತಯಾರಿಸಲಾಗುತ್ತದೆ. ಮೂರು ಕಬ್ಬನ್ನು ಜೊತೆಯಾಗಿ ಕಟ್ಟಿ ಪಾತ್ರೆಯ

ಮೇಲಾವರಣಕ್ಕೆ ಸುತ್ತುವರಿಯಲಾಗುತ್ತದೆ. ಆಹಾರ ತಯಾರಿಸುವ ಮಡಿಕೆಯ ಸುತ್ತಲೂ ಹಳದಿ ಗಿಡವನ್ನು ಕಟ್ಟಿ ನಂತರ ಪೊಂಗಲ್ ಭಕ್ಷ್ಯವನ್ನು ತಯಾರಿಸಲಾಗುತ್ತದೆ.

**ಪ್ರಾರ್ಥನೆ :**

ಪೊಂಗಲ್ ದಿನದಂದು ಸೂರ್ಯ ಅಷ್ಟೋತ್ತರ ಅಥವಾ ಗಾಯತ್ರಿ ಮಂತ್ರವನ್ನು ಪಠಿಸಲಾಗುತ್ತದೆ. ಪೂಜೆ ಆಚರಣೆಗಳ ನಂತರ ಪವಿತ್ರ ತೀರ್ಥ ಮತ್ತು ಹೂಗಳನ್ನು ರಂಗೋಲಿ ಹಾಗೂ ಪೊಂಗಲ್ ತಿನಿಸಿನ ಸುತ್ತ ಪ್ರೋಕ್ಷಿಸಲಾಗುತ್ತದೆ. ಕೊನೆಯ ಪ್ರಾರ್ಥನೆಯನ್ನು ಮಾಡಿ, ಎಲ್ಲರಿಗೂ ಈ ತಿನಿಸನ್ನು ಹಂಚಲಾಗುತ್ತದೆ.

**ಸೂರ್ಯನ ಪ್ರತಿಫಲನ :**

ದಕ್ಷಿಣ ಭಾರತದ ಕೆಲವೆಡೆಗಳಲ್ಲಿ ನೀರಿನಿಂದ ತುಂಬಿದ ಪಾತ್ರೆಯಲ್ಲಿ ಸೂರ್ಯನ ಪ್ರತಿಫಲನವನ್ನು ಕಾಣುವ ಆಚರಣೆ ಇದೆ. ಕೆಲವು ಸಮುದಾಯದವರು ಈ ನೀರಿಗೆ ಕುಂಕುಮ ಮತ್ತು ಹಳದಿಯನ್ನು ಸೇರಿಸಿ ಪ್ರತಿಫಲನವನ್ನು ನೋಡುತ್ತಾರೆ. ಬೆರಳುಗಳ ನಡುವಿನ ಅಂತರದಲ್ಲಿ ಸೂರ್ಯನನ್ನು ನೋಡುವುದು ಇನ್ನೊಂದು ಅನನ್ಯ ಸಂಪ್ರದಾಯವಾಗಿದೆ.

ಪೊಂಗಲ್‌ನ ಮೊದಲ ದಿನದಂದು ಭೋಗಿ ಪೊಂಗಲ್ ಅನ್ನು ಆಚರಿಸುತ್ತಾರೆ ಈ ದಿನದಂದು ಕುಟುಂಬದ ಎಲ್ಲರೂ ಜೊತೆಗೂಡಿ ಇಂದ್ರ ದೇವರನ್ನು ನೆನೆಯುತ್ತಾರೆ ಮತ್ತು ವರ್ಷ ಪೂರ್ತಿ ಮಳೆ ಬೆಳೆಯಾಗುವಂತೆ ದೇವರಲ್ಲಿ ಪ್ರಾರ್ಥಿಸುತ್ತಾರೆ.

ಎರಡನೇ ದಿನವನ್ನು ಸೂರ್ಯ ಪೊಂಗಲ್ ಎಂದು ಕರೆಯುತ್ತಾರೆ. ಈ ದಿನದಂದು ಸೂರ್ಯನನ್ನು ನೆನೆದು ಸುಖ ಶಾಂತಿ ನೆಮ್ಮದಿಗಾಗಿ ಸೂರ್ಯನನ್ನು ಪ್ರಾರ್ಥಿಸಲಾಗುತ್ತದೆ.

ಮೂರನೇ ದಿನದ ಹಬ್ಬವನ್ನು ಮಟ್ಟು ಪೊಂಗಲ್ ಎಂದು ಕರೆಯುತ್ತಾರೆ. ಗೋಪಾಲಕರು ಮತ್ತು ಕುರುಬರು ದನ ಹಾಗೂ ಎತ್ತುಗಳಿಗೆ ಕೃತಜ್ಞತೆಯನ್ನು ಸಲ್ಲಿಸುವ ದಿವಸವಾಗಿದೆ.

ಪೊಂಗಲ್‌ನ ನಾಲ್ಕನೇ ದಿನವನ್ನು ಕಾಣುಮ್ ಪೊಂಗಲ್ ಎಂದು ಕರೆಯುತ್ತಾರೆ. ಈ ದಿನ ಪೊಂಗಲ್‌ನ ಕಡೆಯ ದಿನವಾಗಿದ್ದು ಜನರು ಕುಟುಂಬದ ಇತರ ಸದಸ್ಯರನ್ನು ಕಾಣಲು ತೆರಳುತ್ತಾರೆ.

ಭಾರತದ ಪ್ರತಿಯೊಂದು ಹಬ್ಬವೂ ತನ್ನೊಂದಿಗೆ ಹಲವಾರು ಆಚರಣೆಗಳನ್ನು ಸಹಯೋಗಿಸಿಕೊಂಡಿದೆ. ಈ ಹಳೆಯ ಕಾಲದ ಆಚರಣೆಗಳು ಹಬ್ಬದ ಸಂಸ್ಕೃತಿ, ಕ್ರಮ, ವಿಧಿ ವಿಧಾನಗಳನ್ನು ಎತ್ತಿತೋರಿಸಿವೆ. ಇದಕ್ಕೆ ಸಂಕ್ರಾಂತಿ ಹಬ್ಬ ಕೂಡ ಹೊರತಲ್ಲ. ಕೆಳಗಿನ ಚಿತ್ರದಲ್ಲಿ ಬೆಂಗಳೂರಿನ ಗವಿ ಗಂಗಾಧರ ದೇವಾಲಯದಲ್ಲಿ ಸೂರ್ಯನ ಕಿರಣಗಳು ಗಂಗಾಧರೇಶ್ವರನ ಸ್ಪರ್ಶಿಸುವುದು ಕೂಡ ಈ ಸಂಕ್ರಾಂತಿ ಹಬ್ಬದ ದಿನ ನಡೆಯುತ್ತದೆ.

ಆದರೆ ಈ ವರ್ಷ ಗವಿ ಗಂಗಾಧರ ದೇವಾಲಯದಲ್ಲಿ ಸೂರ್ಯನ ಕಿರಣಗಳು ಸ್ಪರ್ಶಿಸಲಿಲ್ಲ. ಈ ಕಾರಣದಿಂದಾಗಿ 2021ರ ವರ್ಷವೂ ಯಾವುದೋ ಗಂಡಾಂತರಕ್ಕೆ ಸಿಲುಕಲಿದೆ ಎಂದು ಅನೇಕರು ಮಾತನಾಡಿಕೊಳ್ಳುವುದೂ ಇದೆ.

ಹೀಗೆ ಪ್ರತಿಯೊಂದು ನಮ್ಮಲ್ಲಿನ ಹಬ್ಬ ಹರಿದಿನಗಳು ಪಾರಂಪರಿಕವಾಗಿ ವೈಶಿಷ್ಟ್ಯವನ್ನು ಹೊಂದಿ ಭಾರತೀಯ ಸಂಸ್ಕೃತಿಯನ್ನು ಎತ್ತಿಹಿಡಿದಿವೆ ಎಂದು ಹೇಳಬಹುದು.

**ಸಂಗೀತ**
**ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ**

## ಕಲಬುರಗಿಯಲ್ಲಿ ಕಳೆಗಟ್ಟಿದ 85 ನೇ ಕನ್ನಡ ಸಾಹಿತ್ಯ ಸಮ್ಮೇಳನದ ವರದಿ

85ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ತೊಗರಿಯ ಕಣಜ ಕಲಬುರಗಿ ಸರ್ವಸಿದ್ಧಗೊಂಡಿತ್ತು. ನಗರದ ಗುಲ್ಬರ್ಗಾ ವಿಶ್ವವಿದ್ಯಾಲಯ ಆವರಣದಲ್ಲಿ ಮೂರು ದಿನ ಅಂದರೆ 2020 ರ ಫೆಬ್ರವರಿ 5, 6 ಮತ್ತು 7ರಂದು ನುಡಿ ಜಾತ್ರೆ ನಡೆಯಿತು. ಈ ಬಾರಿ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ಹಿರಿಯ ಕವಿ ಎಚ್ ಎಸ್ ವೆಂಕಟೇಶಮೂರ್ತಿ ವಹಿಸಿದ್ದರು. ಸಮ್ಮೇಳನ ಯಶಸ್ವಿಗೊಳಿಸಲು ಕನ್ನಡ ಸಾಹಿತ್ಯ ಪರಿಷತ್, ಕಲಬುರಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಕಲಬುರಗಿ ಜಿಲ್ಲಾಡಳಿತ ಸಂಪೂರ್ಣ ಸಹಕಾರ ನೀಡಿ ಸಮ್ಮೇಳನ ಯಶಸ್ವಿಗೊಳಿಸಿದವು. ಈ ಹಿಂದೆ 1928, 1949, ಹಾಗೂ 1987 ರಲ್ಲಿ ಕಲಬುರಗಿಯಲ್ಲಿ ಅಖಿಲ ಬಾರತ ಸಾಹಿತ್ಯ ಸಮ್ಮೇಳನ ನಡೆದಿದ್ದವು. 1928 ರಲ್ಲಿ ಬಿ ಎಂ ಶ್ರೀಕಂಠಯ್ಯ 1949 ರಲ್ಲಿ ಉತ್ತಂಗಿ ಚನ್ನಪ್ಪ, 1987 ರಲ್ಲಿ ಸಿದ್ದಯ್ಯ ಪುರಾಣಿಕ ಅಧ್ಯಕ್ಷತೆ ವಹಿಸಿದ್ದರು.

**ಸಮ್ಮೇಳನದ ಮೊದಲ ದಿನದ ಕಾರ್ಯಕ್ರಮ –**

ಸಮ್ಮೇಳನ ನಡೆಯುವ ಜಾಗಕ್ಕೆ "ಮಹಾ ಮಂಟಪ; ಅನುಭವ ಮಂಟಪ' ಎಂದು ಹೆಸರಿಡಲಾಗಿತ್ತು. ಶ್ರೀವಿಜಯ ಪ್ರಧಾನ ವೇದಿಕೆಯಲ್ಲಿ ಉದ್ಘಾಟನೆ ಕಾರ್ಯಕ್ರಮ ನಡೆಯಿತು. ಬೆಳಿಗ್ಗೆ 8:30ಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಿಂದ ಆರಂಭವಾಯಿತು, ಹಾಗೆಯೇ ಕುಸನೂರು ರಸ್ತೆ ಮಾರ್ಗವಾಗಿ ಪ್ರಧಾನ ವೇದಿಕೆ ತಲುಪಿತು. ಬೆಳಗ್ಗೆ 11:30 ಕ್ಕೆ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಅವರಿಗೆ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್ ಸಾಥ್ ನೀಡಿದರು.

**ಸಮ್ಮೇಳನದಲ್ಲಿ ಒಟ್ಟು 22 ಗೋಷ್ಠಿಗಳು ನಡೆದವು –**

ಕಲಬುರಗಿ ಕೋಟೆಯನ್ನು ಹೋಲುವ ಶ್ರೀವಿಜಯ ಪ್ರಧಾನ ವೇದಿಕೆಯಲ್ಲಿ ಪ್ರಮುಖ ಗೋಷ್ಠಿಗಳು ನಡೆದವು. ಕಲ್ಯಾಣ ಕರ್ನಾಟಕ ಅಂದು–ಇಂದು–ಮುಂದು, ಸಮಕಾಲೀನ ಸಾಹಿತ್ಯ; ಚಹರೆ ಮತ್ತು ಸವಾಲುಗಳು, ಸ್ತ್ರೀ ಲೋಕ; ತವಕ ತಲ್ಲಣಗಳು, ಕನ್ನಡ ಉಳಿಸಿ, ಬೆಳೆಸುವ ಬಗೆಯ ಬಗ್ಗೆ ಇತಿಹಾಸಕಾರ ಷ.ಶಟ್ಟರ್ ಅವರ ವಿಶೇಷ ಉಪನ್ಯಾಸಗಳು ನಡೆದವು. ಗುಲ್ಬರ್ಗಾ ವಿಶ್ವವಿದ್ಯಾಲಯದ ಆವರಣದ 35 ಎಕರೆ ಪ್ರದೇಶದಲ್ಲಿ ಬೃಹತ್ ವೇದಿಕೆ ಹಾಗೂ ಶ್ರೀವಿಜಯ ಪ್ರಧಾನ ವೇದಿಕೆಯಲ್ಲಿ 10 ಗೋಷ್ಠಿ ಹಾಗೂ ಸಮಾನಂತರ ವೇದಿಕೆಯಲ್ಲಿ 12 ಗೋಷ್ಠಿಗಳು ನಡೆದವು.

**ಮೆರವಣಿಗೆಯಲ್ಲಿ 60 ಕಲಾ ತಂಡಗಳು ಭಾಗವಹಿಸಿದ್ದವು –**

ಸಮ್ಮೇಳನದ ಮೆರವಣಿಗೆಯಲ್ಲಿ ಕಲಬುರ್ಗಿ ಜಿಲ್ಲೆಯ 23 ಕಲಾ ತಂಡಗಳು ಸೇರಿ ಕೊಪ್ಪಳ, ಗದಗ, ಚಾಮರಾಜನಗರ, ಚಿಕ್ಕಮಗಳೂರ, ಚಿತ್ರದುರ್ಗ, ತುಮಕೂರ, ದಾವಣಗೆರೆ, ಧಾರವಾಡ, ಬಳ್ಳಾರಿ, ಬಾಗಲಕೋಟೆ, ಮಂಡ್ಯ, ರಾಯಚೂರು, ಶಿವಮೊಗ್ಗ, ಹಾಸನ, ಆಂಧ್ರ ಗಡಿನಾಡು ಘಟಕ, ಹಾಸನ, ಉಡುಪಿ ಸೇರಿ ವಿವಿಧ ಜಿಲ್ಲೆಗಳ ಒಟ್ಟು 60 ಕಲಾ ತಂಡಗಳು ಈ ಮೆರವಣಿಗೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದವು.

**ಸಮ್ಮೇಳನಾಧ್ಯಕ್ಷರ ಪರಿಚಯ :**

ಹಿರಿಯ ಸಾಹಿತಿ ಡಾ.ಎಚ್ ಎಸ್ ವೆಂಕಟೇಶಮೂರ್ತಿಯವರು ಮೂಲತಃ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಹೊದಿಗೆರೆ ಗ್ರಾಮದವರು. ತಂದೆ ನಾರಾಯಣ ಭಟ್, ತಾಯಿ ನಾಗರತ್ನಮ್ಮ. 76 ವಯಸ್ಸಿನ ಎಚ್ ಎಸ್ ವೆಂಕಟೇಶಮೂರ್ತಿ ಅವರು, ಕನ್ನಡ ಸಾರಸ್ವತ ಲೋಕದಲ್ಲಿ ಎಚ್‌ಎಸ್‌ವಿ ಮೇಷ್ಟ್ರು ಎಂದೇ ಜನಪ್ರಿಯರಾಗಿದ್ದಾರೆ. ಬೆಂಗಳೂರಿನ ಸೇಂಟ್ ಜೋಸೆಫ್ ಕಾಮರ್ಸ್ ಕಾಲೇಜಿನಲ್ಲಿ ದಶಕಗಳ ಕಾಲ ಪ್ರಾಧ್ಯಾಪಕರಾಗಿದ್ದ ಅವರು, ಕನ್ನಡ ಕಟ್ಟುವ ಕಾಯಕದಲ್ಲಿ ಇಂದಿಗೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಸದ್ಯ ಅವರು ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

**ಸಮ್ಮೇಳನಕ್ಕೆ 10ಕೋಟಿ ಅನುದಾನ ಬಿಡುಗಡೆ –**

85ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ರಾಜ್ಯ ಸರ್ಕಾರ 10 ಕೋಟಿ ರೂ ಅನುದಾನ ಬಿಡುಗಡೆ ಮಾಡಿತ್ತು.

ಒಟ್ಟು 618 ವಿವಿಧ ಮಳಿಗೆಗಳು ಒಟ್ಟು 618 ವಿವಿಧ ಮಳಿಗೆಗಳು ಸಾಹಿತ್ಯ ಸಮ್ಮೇಳನದಲ್ಲಿ 405 ಪುಸ್ತಕ ಮಳಿಗೆಗಳು, 193 ವಾಣಿಜ್ಯ ಮಳಿಗೆಗಳು ಹಾಗೂ 20 ಚಿತ್ರಕಲಾ ಪ್ರದರ್ಶನ ಮಳಿಗೆಗಳನ್ನು

ಸಜ್ಜುಗೊಳಿಸಲಾಗಿತ್ತು. ಮಳಿಗೆಗಳ ನಿರ್ವಹಣೆಗಾಗಿ 80 ಸ್ವಯಂಸೇವಕರನ್ನು ನಿಯೋಜಿಸಲಾಗಿತ್ತು. ಅಷ್ಟೂ ಮಳಿಗೆಗಳಿಗೆ ನೆಲಹಾಸು ಹಾಕಿ ಸಮ್ಮೇಳನಕ್ಕೆ ಆಗಮಿಸುವವರಿಗೆ ಉತ್ತಮ ವ್ಯವಸ್ಥೆ ಕಲ್ಪಿಸಲಾಗಿತ್ತು.

**ಮಳಿಗೆಗಳಿಗೆ ವಿವಿಧ ಹೆಸರು**

ಪುಸ್ತಕ ಮಳಿಗೆಗಳಿಗೆ ಕಾಗಿಣಾ, ಭೀಮಾ, ಕೃಷ್ಣಾ, ಕಾರಂಜಾ ಎಂದು ನಾಮಕರಣ ಮಾಡಲಾಗಿತ್ತು. ಕಾಗಿಣಾ ನದಿಯು ಕವಿರಾಜಮಾರ್ಗ ಕೃತಿ ರಚನೆಯಾದ ಮಳಖೇಡ ಸೀಮೆಯಲ್ಲಿದೆ. ಭೀಮಾ ನದಿಯು ಕಲಬುರಗಿ ಜಿಲ್ಲೆಯನ್ನು ಪ್ರತಿನಿಧಿಸಿದರೆ, ಕೃಷ್ಣಾ ನದಿಯು ಕಲ್ಯಾಣ ಕರ್ನಾಟಕದ ಜಿಲ್ಲೆಗಳಾದ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳನ್ನು ಪ್ರತಿನಿಧಿಸುತ್ತದೆ. ಕಾರಂಜಾ ನದಿಯು ಪಕ್ಕದ ಬೀದರ್ ಜಿಲ್ಲೆಯನ್ನು ಪ್ರತಿನಿಧಿಸುತ್ತದೆ.

**ಕಲಬುರಗಿಯಲ್ಲಿನ ವಿಶೇಷ :**

ಶರಣರು, ಸೂಫಿ ಸಂತರು, ನಡೆದಾಡಿದ ನೆಲ, ಸಾವಿರಾರು ವರ್ಷದ ಇತಿಹಾಸ ಹೊಂದಿದ ಈ ಜಿಲ್ಲೆಯಲ್ಲಿ ಹಲವು ಪುರಾತನ ಕುರುಹುಗಳಿವೆ. ಹಲವು ಶಿಲ್ಪ ಕೆತ್ತನೆಗಳನ್ನು ಹೊಂದಿದೆ. ಕಾಳಗಿಯಲ್ಲಿರುವ ಕಲ್ಲಿನ ಮೂರ್ತಿಗಳು, ರಾಷ್ಟ್ರಕೂಟರ ರಾಜಧಾನಿಯಾದ ಮಳಖೇಡದ ಕೋಟೆಗಳು, ಚಿಂಚೋಳಿ ವನ್ಯಧಾಮ, ಅಮರ್ಜಾ ಜಲಾಶಯದಂತಹ ಐತಿಹಾಸಿಕ ಸ್ಥಳಗಳ ಬೀಡು ಈ ಕಲಬುರಗಿ. ಜಿಲ್ಲಾ ಕೇಂದ್ರದಲ್ಲಿ ಶರಣಬಸವೇಶ್ವರರ ದೇವಸ್ಥಾನ, ಸರ್ವ-ಧರ್ಮಗಳ ಸಂಕೇತವಾದ ಖಾಜಾ ಬಂದಾ ನವಾಜ್ ದರ್ಗಾ, ಬುದ್ಧನ ಸಂದೇಶ ಹೇಳುವ ಬೌದ್ಧ ವಿಹಾರ ಎಲ್ಲವೂ ಕಲಬುರಗಿಗೆ ಮುಕುಟ ಮಣಿಯಂತೆ ಕಾಣುತ್ತವೆ.

ಈ ಹಿನ್ನಲೆಯಲ್ಲಿ 85ನೇ ಕನ್ನಡ ಸಾಹಿತ್ಯ ಸಮ್ಮೇಳನ ಬಹು ವೈಶಿಷ್ಟ್ಯತೆ ಮತ್ತು ವಿಜ್ರಂಭಣೆಯೊಂದಿಗೆ ಇತಿಹಾಸದ ಪುಟ ಸೇರಿತು.

**ಹನುಮಗೌಡ**
**ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ**

## ದೇಶದ ಮೊದಲ ಆಟಿಕೆ ವಲಯ–ಕಿನ್ನಾಳ



ಆಟಿಕೆಗಳಿಗೆ ಪ್ರಸಿದ್ಧಿಯಾದ ಜಿಲ್ಲೆ– ಕೊಪ್ಪಳ ಕರ್ನಾಟಕದ ಈ ಜಿಲ್ಲೆಯು ದೇಶದ ಪ್ರಥಮ ಆಟಿಕೆ ಉತ್ಪಾದನಾ ವಲಯವಾಗಿದ್ದು, ರಾಜ್ಯ ಸರ್ಕಾರವು ದೇಶ – ವಿದೇಶಗಳ ಆಟಿಕಾ ತಯಾರಕರಿಗೆ ಈ ವಲಯದಲ್ಲಿ ಹೂಡಿಕೆ ಮಾಡಲು ಮುಕ್ತವಾಗಿ ಆಹ್ವಾನ ನೀಡಿದೆ. ಹಾಗೂ ಕರ್ನಾಟಕದ ಆಟಿಕೆ ಉದ್ಯಮಗಳಿಗೆ ಉತ್ತೇಜನ ನೀಡಲು "ಉತ್ಪನ್ನ ನಿರ್ದಿಷ್ಟ ಕೈಗಾರಿಕಾ ಕ್ಲಸ್ಟರ್ ಅಭಿವೃದ್ಧಿ" (PSICD Product Specific Industrial Cluster Development). ಎಂಬ ಕಾರ್ಯಕ್ರಮವನ್ನು ಆರಂಭಿಸಿದೆ. ಭಾರತದಲ್ಲಿ ಆಟಿಕೆಗಳ ಮೂರನೇ ಅತಿ ದೊಡ್ಡ ಮಾರುಕಟ್ಟೆ ಎಂದರೆ ಕರ್ನಾಟಕ. ಕಿನ್ನಾಳ ಆಟಿಕೆ  ಕೊಪ್ಪಳ ಜಿಲ್ಲೆಯ ಒಂದು ಚಿಕ್ಕ ಗ್ರಾಮವೇ–ಕಿನ್ನಾಳ ಇದಕ್ಕೆ ಮೊದಲು "ಕೊಪಣಚಳ" ಎಂದು ಕರೆಯುತ್ತಿದ್ದರು.  ಕಿನ್ನಾಳ ಎಂದರೆ 'ಆಟಿಕೆ' ಈ ಗ್ರಾಮದ ಕರಕುಶಲ ಕರ್ಮಿಗಳಿಗೆ ಹಾಗೂ ಕರಕುಶಲಕಲೆಗೆ ಹೆಸರುವಾಸಿಯಾಗಿದೆ. ವಿಜಯನಗರ ಸಾಮ್ರಾಜ್ಯ ಹಾಗೂ ಹೈದ್ರಾಬಾದ್ ನಿಜಾಮರ ಕಾಲದಲ್ಲಿ ಈ ಕಿನ್ನಾಳ ಕಲೆ ಹೆಚ್ಚು ಪ್ರವರ್ಧಮಾನಕ್ಕೆ ಬಂದಿತ್ತು.  ಬೇಕಾಗುವ ಸಾಮಗ್ರಿಗಳು – ಹಗರು ಮರ, ಇದ್ದಿಲು, ಹುಣಸೆಬೀಜದ ಪುಡಿ, ಒರಟು ಕಲ್ಲುಗಳು, ಸೆಣಬಿನ ತುಣುಕುಗಳು, ಮರದ ಹೊಟ್ಟು/ಪುಡಿ, ಕೃತಕವಾಗಿ ತಾವೇ ತಯಾರಿಸಿದ ಬಣ್ಣ ಹಾಗೂ ಇತರೆ ಕಚ್ಚಾ ವಸ್ತುಗಳು ಕಿನ್ನಾಳ ಆಟಿಕೆಗಳು ಧಾರ್ಮಿಕ ವಿಗ್ರಹಗಳಿಗೆ ಈ ಪಟ್ಟಣವು ಪ್ರಸಿದ್ಧಿಯನ್ನು ಪಡೆದಿದೆ. ಈ ಕಲೆಗೆ ಭೌಗೋಳಿಕ ಸೂಚನೆಯನ್ನು ನಿಡಲಾಗಿದೆ ಮತ್ತು ಇದರ ಜಿಐ ಸಂಖ್ಯೆ–213 ಆಗಿದೆ.

ಕುಶಲಕರ್ಮಿಗಳನ್ನು ಚಿತ್ರಗಾರ ಎಂದು ಕರೆಯಲಾಗುತ್ತದೆ ಆಟಿಕೆಗಳಿಗೆ ಹಗುರವಾದ ಮರವನ್ನು ಬಳಸಲಾಗುತ್ತದೆ ವಿವಿಧ ಭಾಗಗಳನ್ನು ಮತ್ತು ಸೇರಲು ಬಳಸುವ ಪೇಸ್ಟನ್ನು ಹುಣಸೆ ಬೀಜಗಳು ಮತ್ತು ಬೆಣಚುಗಲ್ಲುಗಳಿಂದ ತಯಾರಿಸಲಾಗುತ್ತದೆ. ಸೆಣಬಿನ ಚಿಂದಿಗಳನ್ನು ನೆನೆಸಿ ತುಂಡುಗಳನ್ನಾಗಿ ಕತ್ತರಿಸಿ ಒಣಗಿಸಿ, ಪುಡಿ ಮಾಡಿ ಗರಗಸದ ಧೂಳು ಮತ್ತು ಹುಣಸೆ ಬೀಜದ ಪೇಸ್ಟನೊಂದಿಗೆ ಬೆರಸಿ ಕಿಟ್ಟಾ ತಯಾರಿಸಲಾಗುತ್ತದೆ. ಆಕೃತಿಯ ಘಟಕಗಳನ್ನು ಒಟ್ಟುಗೂಡಿಸಿದ ನಂತರ ಕಿಟ್ಟಾವನ್ನು ಕೈಯಿಂದಲೇ ಅನ್ವಯಿಸಲಾಗುತ್ತದೆ ಮತ್ತು ಸಣ್ಣ ಹತ್ತಿ ತುಂಡುಗಳನ್ನು ಹುಣಸೇ ಪೇಸ್ಟನಿಂದ ಅಂಟಿಸಲಾಗುತ್ತದೆ. ಇದರ ಮೇಲೆ ಬೆಣಚುಕಲ್ಲು ಪೇಸ್ಟನ್ನು  ಅನ್ವಯಿಸಲಾಗುತ್ತದೆ ಇದು ಬಣ್ಣದ ಅನ್ವಯಕ್ಕೆ ಆಧಾರವಾಗಿದೆ.

ಕಿನ್ನಾಳ ಒಂದು ಕಾಲದಲ್ಲಿ ಕರಕುಶಲ ಕಲೆಗಳ ಅಭಿವೃದ್ಧಿ ಹೊಂದುತ್ತಿರುವ ಕೇಂದ್ರವಾಗಿತ್ತು. ಇಲ್ಲಿ ಹಿಂದೆ ವಿವಿಧ ಉದ್ಯೋಗಗಳಲ್ಲಿ ತೊಡಗಿರುವ ಜನರನ್ನು ಚಿತ್ರಿಸುವ ಆಟಿಕೆಗಳು ಮಾತ್ರ ಜನಪ್ರಿಯವಾಗಿದ್ದವು. ಆದರೆ ಈಗ ಆದ್ಯತೆಗಳು ವ್ಯಕ್ತಿಗಳು, ಪ್ರಾಣಿಗಳು, ಪಕ್ಷಿಗಳಿಗೆ ನೀಡಲಾಗುತ್ತಿದೆ. ಈ ಮೂಲಕ ಕಿನ್ನಾಳವು ಜಗತ್ ಪ್ರಸಿದ್ದವಾಗುತ್ತಿದೆ.

**ವಿಜಯ್ ಕುಮಾರ**

**ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ**

## ಬಸವಣ್ಣನವರ ಬದುಕು ಮತ್ತು ಸಾಧನೆ

ಬಸವಣ್ಣ ಅವರು ತಮ್ಮ ವಚನದ ಮೂಲಕ ಸಾಮಾಜಿಕ ಜಾಗೃತಿಯನ್ನು ಹರಡಿದರು ಅಲ್ಲದೇ ಇವರು ಜನಪ್ರಿಯ ವಚನಕಾರರು. ಬಸವಣ್ಣ ಅವರು ಲಿಂಗ ಅಥವಾ ಸಾಮಾಜಿಕ ತಾರತಮ್ಯ, ಮೂಢನಂಬಿಕೆಗಳು ಮತ್ತು ಆಚರಣೆಗಳನ್ನು ತಿರಸ್ಕರಿಸಿದರು ಆದರೆ ಶಿವಲಿಂಗ ಅದರೊಂದಿಗೆ ಇಷ್ಟಲಿಂಗಹಾರವನ್ನು ಪರಿಚಯಿಸಿದರು, ಬಸವಣ್ಣ ಸಾಮ್ರಾಜ್ಯದ ಮುಖ್ಯಮಂತ್ರಿಯಾಗಿ, ಅವರು ಅನುವಮಂಟಪ (ಆಧ್ಯಾತ್ಮಿಕ ಅನುಭವದ ಸಭಾಂಗಣ) ನಂತಹ ಹೊಸ ಸಾರ್ವಜನಿಕ ಸಂಸ್ಥೆಗಳನ್ನು ಪರಿಚಯಿಸಿದರು, ಇದು ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಪ್ರಶ್ನೆಗಳನ್ನು ಚರ್ಚಿಸಲು ಎಲ್ಲಾ ಸಾಮಾಜಿಕ-ಆರ್ಥಿಕ ಹಿನ್ನೆಲೆಯಿಂದ ಬಂದ ಪುರುಷರು ಮತ್ತು ಮಹಿಳೆಯರನ್ನು ಸ್ವಾಗತಿಸಿದರು.

ಸಾಂಪ್ರದಾಯಿಕ ದಂತ ಕಥೆಗಳು ಮತ್ತು ಹ್ಯಾಗೋಗ್ರಾಫಿಕ ಗ್ರಂಥಗಳು ಬಸವವನ್ನು ಲಿಂಗಾಯತ ಧರ್ಮದ ಸ್ಥಾಪಕ ಎಂದು ಹೇಳುತ್ತವೆ. ಆದಾಗ್ಯೂ ಕಲಾಚೂರಿ ಶಾಸನಗಳಂತಹ ಐತಿಹಾಸಿಕ ಪುರಾವೆಗಳನ್ನು ಅವಲಂಬಿಸಿರುವ ಆಧುನಿಕ ಧರ್ಮದ ಅಸ್ತಿತ್ವದಲ್ಲಿರುವ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಿದ, ಪರಿಷ್ಕರಿಸಿದ ಮತ್ತು ಶಕ್ತಿಯುತಗೊಳಿಸಿದ ಕವಿ ತತ್ವಜ್ಞಾನಿ ಬಸವ ಎಂದು ಹೇಳುತ್ತದೆ.

**ಇವರ ಆರಂಭಿಕ ಜೀವನ:**

ಬಸವಣ್ಣನವರು ಕ್ರಿ.ಶ 1105ರಲ್ಲಿ ಉತ್ತರ ಕರ್ನಾಟಕದ ಬಾಗೇವಾಡಿ ಪಟ್ಟಣದಲ್ಲಿ ಮಾದರಸ ಮತ್ತು ಮಾದಲಾಂಬಿಕೆ ಎಂಬ ದಂಪತಿಗಳಿಗೆ ಜನಿಸಿದರು. ಹಿಂದೂದೇವತೆ ಶಿವನಿಗೆ ಅರ್ಪಿತವಾದ ಕನ್ನಡದ ಕುಟುಂಬ ಅದು. ಅವರು ನಂದಿ (ಶಿವನವಾಹಕ) ಮತ್ತು ಶೈವಸಂಪ್ರದಾಯದ ಗೌರವಾರ್ಥವಾಗಿ ಸಂಸ್ಕೃತ ವೃಷಭದ ಕನ್ನಡ ರೂಪವಾದ ಬಸವ ಎಂದು ಇವರನ್ನು ಹೆಸರಿಸಲಾಯಿತು.

ಬಸವ ಬೆಳೆದದ್ದು ಕೂಡಲಸಂಗಮ (ಈಶಾನ್ಯ ಕರ್ನಾಟಕ), ಕೃಷ್ಣ ಮತ್ತು ಅದರ ಉಪನದಿ ಮಲಪ್ರಭಾ ನದಿಗಳ ಹತ್ತಿರ. ಬಸವ, ಕೂಡಲಸಂಗಮ ಪಟ್ಟಣದಲ್ಲಿ ಒಂದು ಹಿಂದೂ ದೇವಾಲಯದಲ್ಲಿ ಹನ್ನೆರಡುವರ್ಷಗಳ ಕಾಲ ಸಂಗಮೇಶ್ವರರ ಬಳಿ ಕಲಿಕೆಯ ನಂತರ ಬಸವ ತನ್ನ ತಾಯಿಯ ಕಡೆಯಿಂದ ಸೋದರ ಸಂಬಂಧಿಯನ್ನು ಮದುವೆಯಾದರು. ಅವರ ಪತ್ನಿ ಗಂಗಾಂಬಿಕೆ ರಾಜ ಬಿಜ್ಜಳ, ಕಲಚೂರಿ ರಾಜರ ಬಳಿ ರಾಜನ ಆಸ್ಥಾನಕ್ಕೆ ಮಂತ್ರಿ ಆಗಿ ಕೆಲಸ ಮಾಡಲು ಪ್ರಾರಂಭಿಸಿದನು. ಅವನ ಮಾವನ ಮರಣ ಹೊಂದಿದಾಗ, ರಾಜನು ಅವನನ್ನು ಮುಖ್ಯಮಂತ್ರಿಯಾಗಲು ಆಹ್ವಾನಿಸಿದನು. ನಂತರ ರಾಜ ಬಿಜ್ಜಳನು ಬಸವನ ಸಹೋದರಿಯನ್ನು ಮದುವೆಯಾದನು.

ಸಾಮ್ರಾಜ್ಯದ ಮುಖ್ಯಮಂತ್ರಿಯಾಗಿ, ಬಸವ ಅವರ ರಾಜ್ಯ ಖಜಾನೆಯನ್ನು ನೋಡಿಕೊಳ್ಳುತ್ತಿದನು. ಜೊತೆಗೆ ಸಾಮಾಜಿಕ ಸುಧಾರಣೆಗಳನ್ನು ಪ್ರಾರಂಭಿಸಿದರು ಮತ್ತು ಧಾರ್ಮಿಕ ಆಂದೋಲನವನ್ನು ಶೈವಧರ್ಮವನ್ನು ಪುನರುಜ್ಜೀವನ ಗೊಳಿಸುವತ್ತ ಗಮನಹರಿಸಿದರು. ಜಂಗಮರೆಂದು ಕರೆಯಲ್ಪಡುವ ತಪಸ್ವಿಗಳನ್ನು ಗುರುತಿಸಿ ಮತ್ತು ಸಬಲೀಕರಣಗೊಳಿಸಿದರು. ಅವರು 12ನೇ ಶತಮಾನದಲ್ಲಿ ಪ್ರಾರಂಭಿಸಿದ ನವೀನ ಸಂಸ್ಥೆಗಳಲ್ಲಿ ಒಂದಾದ ಅನುಭವಮಂಟಪ,. ಇದು ಸಾರ್ವಜನಿಕ ಸಭೆ ಮತ್ತು ದೂರದ ದೇಶಗಳಿಂದ ಬಂದು ಜೀವನದ ಆಧ್ಯಾತ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಹಿರಂಗವಾಗಿ ಚರ್ಚಿಸಲು ವಿವಿಧ ಹಂತಗಳಲ್ಲಿ ಪುರುಷರು ಮತ್ತು ಮಹಿಳೆಯರನ್ನು ಆಕರ್ಷಿಸಿತು. ಅವರ ಸ್ಥಳೀಯ ಭಾಷೆಯಲ್ಲಿ ವಚನ ರಚಿಸಿದರು ಮತ್ತು ತಮ್ಮ ಸಂದೇಶವನ್ನು ಜನಸಾಮಾನ್ಯರಿಗೆ ಹರಡಿದರು. ಅವ ಬೋಧನೆಗಳು ಮತ್ತು ಪದ್ಯಗಳಾದ **“ಕಾಯಕವೇ ಕೈಲಾಸ”** (ಕೆಲಸವು ಕೈಲಾಶ್ (ಆನಂದ, ಸ್ವರ್ಗ), ಅಥವಾ ಕೆಲಸವು ಪೂಜೆ) ಎಂಬುವುದಾಗಿವೆ.

**ಇವರ ಸಾಮಾಜಿಕ ಸುಧಾರಣೆ :**

ಜಾತಿಯ ಹೊರತಾಗಿಯೂ ಪ್ರತಿಯೊಬ್ಬ ಮನುಷ್ಯರೂ ಸಮಾನರು, ಮತ್ತು ಎಲ್ಲಾ ರೀತಿಯಲ್ಲೂ ಸಮಾನರೆಂದು ಬಸವಣ್ಣ ಪ್ರತಿಪಾದಿಸಿದರು. ಬಸವ ಮತ್ತು ಶರಣ ಸಮುದಾಯದ ದೃಷ್ಟಿಯಲ್ಲಿ ನಿಜವಾದ ಸಂತ ಮತ್ತು ಶೈವಭಕ್ತರ ಅಸಮಾನತೆಯನ್ನು ಪ್ರತಿಭಟಿಸುತ್ತಿದರು. ಸಮಾಜದ ಡೊಂಕನ್ನು ಬಿಂಬಿಸಿದರು. ಅಂತರ್ ಜಾತಿಯ ವಿವಾಹಕ್ಕೆ ಪ್ರೋತ್ಸಹ ನೀಡಿದರು. ಈ ಮೂಲಕ ಸಮಾಜದ ಡೊಂಕನ್ನು ಸರಿಪಡಿಸಿದರು.

ಈ ಮೂಲಕ ಬಸವಣ್ಣ ಒಬ್ಬ ಮಹಾನ್ ಮಾನವತಾವಾದಿಯಾಗಿ ಪರಿಣಮಿಸಿದ್ದಾರೆ.

**ಕಲಾಶ್ರೀ**
**ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ**

# ಅಲ್ಲಮಪ್ರಭುವಿನ ವಚನ ವಿಶಿಷ್ಟತೆ

*"ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ*

*ಆಗಲಿ ಮಹಾಪ್ರಸಾದವೆಂದೆನಯ್ಯ*

*ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ*

*ಆಗಲಿ ಮಹಾಪ್ರಸಾದವೆಂದೆನಯ್ಯ*

*ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದರೆ*

*ಆಗಲಿ ಮಹಾಪ್ರಸಾದವೆಂದೆನಯ್ಯ*

*ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ*

*ಆಗಲಿ ಮಹಾಪ್ರಸಾದವೆಂದೆನಯ್ಯ*

*ಗುಹೇಶ್ವರ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆನು".*

"ಕ್ರುತಯುಗ-ತ್ರೇತಾಯುಗ-ದ್ವಾಪರಯುಗ-ಕಲಿಯುಗ" ಎನ್ನುವ ಪದಗಳು 4 ಬಗೆಯ ಕಾಲಮಾನಗಳನ್ನು ಹೆಸರಿಸುತ್ತವೆ. ಹಿಂದಿನ ಕಾಲದಿಂದ ಇಂದಿನವರೆಗೆ ಮಾನವಕುಲ ಹುಟ್ಟಿ ಬೆಳೆದು ಬಾಳಿಬಂದ ಸಮಯವನ್ನು ಬಾರತೀಯ ಸಂಸ್ಕ್ರುತಿಯ ಜನಸಮುದಾಯವು ಈ ರೀತಿ 4 ಹಂತಗಳಲ್ಲಿ ಗುರುತಿಸಿಕೊಂಡಿದೆ. ಕ್ರುತಯುಗದಲ್ಲಿ ಮಾನವ ಸಮುದಾಯದಲ್ಲಿ ತುಂಬಾ ಒಳ್ಳೆಯತನದ ನಡೆನುಡಿಗಳು ಇದ್ದುವೆಂದು, ಮುಂದಿನ ಯುಗಗಳಲ್ಲಿ ಒಳ್ಳೆಯತನ ಕಡಿಮೆಯಾಗುತ್ತಾ ಬಂದು, ಇದೀಗ ಕಲಿಯುಗದಲ್ಲಿ ಮಾನವರ ನಡೆನುಡಿಗಳಲ್ಲಿ ಕೆಟ್ಟತನವೇ ಹೆಚ್ಚಾಗಿ ಕಂಡುಬರುತ್ತಿದೆಯೆಂಬ ಒಳಮಿಡಿತವು ಜನಮನದಲ್ಲಿ ನೆಲೆಯೂರಿದೆ.

ಆದರೆ ಈ ವಚನದಲ್ಲಿ ಅಲ್ಲಮನು ಒಂದು ಯುಗ ಕಳೆದು ಮತ್ತೊಂದು ಯುಗ ಬಂದಂತೆಲ್ಲಾ ಮಾನವರ ಅರಿವು ಹೆಚ್ಚಾಗುತ್ತಾ, ಅವರ ನಡೆನುಡಿಗಳಲ್ಲಿ ಇನ್ನೂ ಹೆಚ್ಚಿನ ಮಾನವೀಯ ಮಿಡಿತಗಳು ಅಂದರೆ ಸಹಜೀವಿಗಳ ಬಗ್ಗೆ ಒಲವು ಮತ್ತು ಕರುಣೆಯ ಒಳಮಿಡಿತಗಳು ಹಾಗೂ ಜವಾಬ್ದಾರಿಯುತವಾದ ವರ್ತನೆಗಳು ಕಂಡು ಬರುತ್ತಿವೆಯೆಂದು ಹೇಳುತ್ತಾ, ಅದನ್ನು 4 ಹಂತಗಳಲ್ಲಿ ಗುರು- ಶಿಶ್ಯರ ನಡುವಣ ನಂಟಿನಲ್ಲಿ ಉಂಟಾದ ಒಳಿತಿನ ಬೆಳವಣಿಗೆಯ ಮೂಲಕ ಚಿತ್ರಿಸಿದ್ದಾನೆ.

ತನ್ನ ಬಳಿ ಅರಿವನ್ನು ಪಡೆಯಲು/ವಿದ್ಯೆಯನ್ನು ಕಲಿಯಲು ಬಂದ ಶಿಶ್ಯನ ಮೈಮೇಲೆ ಗುರು ಮೊದಮೊದಲು ಮನಬಂದಂತೆ ಹಲ್ಲೆ ಮಾಡುತ್ತಿದ್ದ. ಈ ಹಂತದಲ್ಲಿ ಒಂದು ಜಡ ವಸ್ತುವನ್ನು ಹೊಡೆದು ಬಡಿದು ಕೊರೆದು ಕತ್ತರಿಸಿ ಅದಕ್ಕೆ ಒಂದು ರೂಪವನ್ನು ಕೊಡುವಂತೆ ಗುರು ಶಿಶ್ಯನ ಮೇಲೆ ತನ್ನ ಬಲವನ್ನು ತೋರಿಸುತ್ತಿದ್ದ ಎನ್ನಬಹುದು.

ಎರಡನೆಯ ಹಂತದಲ್ಲಿ ಗುರು ಶಿಶ್ಯನನ್ನು "ತನ್ನಂತೆ ಒಂದು ಜೀವಿ" ಎಂದು ತಿಳಿದು, ಅವನ ಮೈ – ಮನಗಳ ಮೇಲೆ ಹಿಡಿತವನ್ನು ಪಡೆಯಲೆಂದು ಬಯ್ಯುತ್ತಿದ್ದ. ತಮ್ಮ ಬಳಿ ಇರುವ ವ್ಯಕ್ತಿಗಳನ್ನು "ತಮ್ಮ ಇಚ್ಚೆಗೆ ತಕ್ಕಂತೆ ತಗ್ಗಿ ಬಗ್ಗಿ ನಡೆಯುವಂತೆ ಮಾಡಲು" ಬಡಿಯುವಿಕೆ ಮತ್ತು ಬಯ್ಯುವಿಕೆಯನ್ನು ಉಪಕರಣಗಳನ್ನಾಗಿ ಮಾನವರು ಬಳಸುತ್ತಾರೆ. ಅಂತೆಯೇ ಇಲ್ಲಿ ಗುರು ಶಿಶ್ಯನನ್ನು ತನ್ನ ಹತೋಟಿಯಲ್ಲೇ ಇರಬೇಕಾದ ಮತ್ತು ಬೆಳೆಯಬೇಕಾದ ವ್ಯಕ್ತಿಯೆಂದು ತಿಳಿದಿದ್ದ ಎಂದು ಅರ್ಥೈಸಬಹುದಾಗಿದೆ.

ಮೂರನೆಯ ಹಂತದಲ್ಲಿ ಶಿಶ್ಯನ ಮನದ ಒಳಮಿಡಿತಗಳನ್ನು ಅರಿತುಕೊಂಡು, ಅದಕ್ಕೆ ತಕ್ಕಂತೆ ವಿದ್ಯೆಯನ್ನು ಕಲಿಸುವ ರೀತಿಯನ್ನು ಅಳವಡಿಸಿಕೊಂಡಿದ್ದಾನೆ. ಆದುದರಿಂದಲೇ ಜಂಕಿಸಿ ಅಂದರೆ ಕಣ್ಸನ್ನೆ ಮತ್ತು ಕಯ್ಸನ್ನೆಗಳಿಂದಲೇ ಶಿಶ್ಯನ ಮನವನ್ನು ವಿದ್ಯೆಯತ್ತ ಹೊರಳುವಂತೆ ಮಾಡಿ ಬುದ್ದಿಯನ್ನು ಕಲಿಸುತ್ತಿದ್ದ ಎಂಬುದಾಗಿ ಹೇಳಬಹುದು.

ನಾಲ್ಕನೆಯ ಹಂತದಲ್ಲಿ ಗುರು ಶಿಶ್ಯನನ್ನು ತನ್ನಂತೆ ಒಂದು ಜೀವಿಯೆಂದು ತಿಳಿಯುವುದರ ಜತೆಜತೆಗೆ, ಮುಂದೆ ಬೆಳೆದು ಬಾಳಿ ಬದುಕಬೇಕಾದ ಅವನನ್ನು ಒಲವುನಲಿವುಗಳಿಂದ ಕಾಣುತ್ತಾ, ಅವನಲ್ಲಿ ಜೀವನದ ಬಗ್ಗೆ ಅಪಾರವಾದ ಆತ್ಮವಿಶ್ವಾಸವನ್ನು ಮೂಡಿಸಿ ಮುನ್ನಡೆಯುವಂತೆ ಮಾಡತೊಡಗಿದ್ದಾನೆ. ಕಾಲ ಉರುಳಿದಂತೆಲ್ಲಾ ಮಾನವ ಸಮಾಜದಲ್ಲಿ ಉಂಟಾಗುವ ಬಹುಬಗೆಯ ಬದಲಾವಣೆಗಳು ಗುರುವಿನ ವ್ಯಕ್ತಿತ್ವದ ಮೇಲೆ ಪರಿಣಾಮವನ್ನು ಬೀರಿ ಗುರುವಿನಲ್ಲಿ ಒಲವು, ಕರುಣೆ ಮತ್ತು ಸಮಾನತೆಯ ನಡೆನುಡಿಗಳು ಹೊರಹೊಮ್ಮುವಂತೆ ಮಾಡಿವೆ.

ಆದರೆ ಈ ವಚನದ ಅರ್ಥವನ್ನು ಬೇರೆಯದೇ ಆದ ದೃಷ್ಟಿಯಲ್ಲಿ ವಿಶ್ಲೇಷಿಸುತ್ತುರುವುದು ವಿಪರ್ಯಾಸವೇ ಸರಿ.

**ಚೈತ್ರಾ ಬಿ ಕೆ**
**ನಾಲ್ಕನೇ ಸೆಮಿಸ್ಟರ್ ಬಿ.ಇಡಿ ಪ್ರಶಿಕ್ಷಣಾರ್ಥಿ**

**ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಸ್ವರಚಿತ ಕವನವಾಚನ ಸ್ಪರ್ಧೆಯಲ್ಲಿ ಭಾಗವಹಿಸಿದ ಪ್ರೌಢಶಾಲಾ ವಿದ್ಯಾರ್ಥಿಗಳಿಂದ ರಚಿತವಾದ ಕವನಗಳು**

## ಗೆಳೆತನ

ಅರಮನೆ ಕಟ್ಟುವಂತಹ
ಸಿರಿತನವಿಲ್ಲದಿದ್ದರೇನಂತೆ
ಕಣ್ಣೀರು ಒರೆಸುವಂತಹ
ಗೆಳೆತನ ಇದ್ದರೆ ಸಾಕು

ದೂರ ಇದ್ದರೆ ಪ್ರೀತಿ ಜಾಸ್ತಿ
ಹತ್ತಿರ ಇದ್ದರೆ ಕೋಪ ಜಾಸ್ತಿ
ಕಾಣದೇ ಇದ್ದರೆ ಕನಸುಗಳು ಜಾಸ್ತಿ
ಅದಕ್ಕೆ ಹೃದಯದಲ್ಲಿ ಇರಬೇಕು ಗೆಳೆತನ ಎಂಬ ಆಸ್ತಿ

ಹನಿಯಾಗಿ ಬಂದ ಸ್ನೇಹ
ಹೊಳೆಯಾಗಿ ಹರಿಯಲಿ
ಅರಿಯದೆ ಬಂದ ಸ್ನೇಹ
ಮುರಿಯದೆ ಇರಲಿ
ನೆನೆಯದೆ ಬಂದ ಸ್ನೇಹ
ಕೊನೆಯಾಗದೆ ಇರಲಿ

**ಸಿಂಚನ ಎ**
9ನೇ ತರಗತಿ
ಪ್ರಕೃತಿ ಕಾನ್ವೆಂಟ್, ಶಿಕಾರಿಪುರ

## ಹನಿಗವನಗಳು

ಕರುನಾಡ ಅಂದ ನೋಡು
ಕೇಳಿಲ್ಲಿಯ ಹಕ್ಕಿಯ ಹಾಡು
ಸವಿದಿ ನೋಡು ಮಲೆನಾಡು
ಅರಿತು ಮಾತನಾಡು ಕನ್ನಡ

ಕನ್ನಡ ಮಾತನಾಡುವಂತವನಾಗು
ಮಾತನಾಡಿ ಇಲ್ಲಿಯ ಮಗನಾಗು
ಜನರ ಪ್ರೀತಿಗೆ ಪಾತ್ರನಾಗು
ಎಲ್ಲಕ್ಕಿಂತ ಮೊದಲು ಕನ್ನಡ ಭಾಷಾಭಿಮಾನಿಯಾಗು

ಕನ್ನಡ ಉಳಿಸಿ
ಕನ್ನಡ ಬೆಳೆಸಿ
ಕನ್ನಡ ಆಲಿಸಿ
ಕನ್ನಡವನ್ನೇ ನುಡಿಸಿ

ಕನ್ನಡಕ್ಕೆ ಹಾಕಿ ಜೈಕಾರ
ಅದು ನಿಮಗೆ ಮಾಡುವುದು ಸತ್ಕಾರ
ಕೇಳಿ ಒಮ್ಮೆ ಕನ್ನಡದ ಝೇಂಕಾರ
ಅಂದು ನಿಮ್ಮ ಬಾಳಾಗುವುದು ಸಾಕ್ಷಾತ್ಕಾರ

ಸುತ್ತ ಮುತ್ತಲ ಹಕ್ಕಿಯ ಹಾಡು
ಮನಮೋಹಕವಾದ ಪ್ರಕೃತಿ ನೋಡು
ನಿಸರ್ಗದ ಸೌಂದರ್ಯದ ಸೊಗಡು
ನನ್ನನ್ನಾಗಿಸಿದೆ ಇಂದು ಕುರುಡು

ಹೇ ಮಾನವನೇ ನಿನ್ನ ಸ್ವಾರ್ಥಕ್ಕಾಗಿ
ಮಾಡಬೇಡ ಭೂಮಿಯನ್ನು ಬರಡು
ಪ್ರಕೃತಿಯೇ ನಾಶವಾದ ಮೇಲೆ
ನಿನಗಿಲ್ಲ ಇಲ್ಲಿ ಬೀಡು

ಮಾನವನಾದರೆ ಸಾಲದು
ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಬೇಕು
ಮಾತನಾಡಲು ಬಂದರೆ ಸಾಲದು

ಮಾತನ್ನು ಅರಿಯುವ ಶಕ್ತಿ ಬೇಕು

ಅಹಂಕಾರ ಬಿಡಲು ಧೈರ್ಯಬೇಕು

ನಾನು ಎಂಬುದಕ್ಕೆ ಕತ್ತರಿ ಬೇಕು

ಇದೆಲ್ಲವೂ ಆಗಬೇಕಾದರೆ ಮೊದಲು ನೀನು

ವಿಶ್ವ ಮಾನವತೆಯ ಸಾರವನ್ನು ಅರಿಯಬೇಕು

**– ಮೈತ್ರೆಯೀ ಎಸ್.**

**ಕುಮದ್ವತಿ ರೆಸಿಡೆನ್ಸಿಯಲ್ ಸೆಂಟ್ರಲ್ ಸ್ಕೂಲ್, ಶಿಕಾರಿಪುರ**

## ಹನಿಗವನಗಳು

**ಹೆಜ್ಜೆ**

ಸೋತೆ ಎಂದು ನೀ
ಮುಂದಿಟ್ಟ ಹೆಜ್ಜೆ ಹಿಂದಿಡಬೇಡ
ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ
ಇತಿಹಾಸವನ್ನೇ ಸೃಷ್ಟಿ ಮಾಡುವ
ಹೆಜ್ಜೆಯಾಗಿರಬಹುದು

**ಬದುಕು**

ಬದುಕಿನಲ್ಲಿ ಇರಲೊಂದು ಸೂತ್ರ
ಸಹಕಾರ ಸಹಬಾಳ್ವೆಯಾಗಬೇಕು ನಮ್ಮ ಮಂತ್ರ
ಎಂದೂ ಸುಳಿಯದಿರಲಿ ತಂತ್ರ ಕುತಂತ್ರ
ಅಂದಿಗೆ ನಮ್ಮ ಬದುಕು ಸ್ವತಂತ್ರ

**ಸಮಾನತೆ**

ಇಲ್ಲಿ ಎಲ್ಲಾರು ಒಂದೇ ಎಂದೆ
ಸರ್ವ ಜಾತಿ ಒಂದೇ ಎಂದೆ
ಬಸವಣ್ಣ ಆಚಾರ್ಯರು ದಾಸರು
ತಿದ್ದುಪಡಿಸಲು ಬಂದರು ಅಂದೆ
ಆದರೂ ಹೋಗಲಿಲ್ಲ ಜಾತಿಗಳ ಕಂತೆ ಕಂತೆ
ಈಗಾದರೂ ಹೋಗಲಿ ಜಾತಿಗಳ ಬೇಧ ಭಾವ ಎಂದೆ
ಅಂದಿಗೆ ನಮ್ಮ ದೇಶ ಸ್ವತಂತ್ರ ಅಂದೇ.

**ಮನು ಆರ್**
8ನೇ ತರಗತಿ
ಪ್ರಕೃತಿ ಕಾನ್ವೆಂಟ್, ಶಿಕಾರಿಪುರ

## ಮಗುವಿನ ಬಾಳು

ಮಡಿಲಲಿ ತಾಯಿಯ ಮಗನಾಗಿ
ಬೆಳೆಯುವಾಗ ಎಲ್ಲರ ಪ್ರೀತಿಗೆ ಪಾತ್ರನಾಗಿ
ಊರಿನ ಜನರಿಗೆ ಪ್ರೀಯನಾಗಿ
ಗುರು ಹಿರಿಯರಿಗೆ ವಿಧೇಯನಾಗಿ ॥ಮಡಿಲಲಿ ತಾಯಿಯ॥
ನಗುತ ದೇಶ ಸೇವೆಗಾಗಿ
ಶಾಂತಿಯ ಯೋಗಿಯಾಗಿ ॥ಮಡಿಲಲಿ ತಾಯಿಯ॥
ಕನ್ನಡ ಮಾತೆಯ ಮಗನಾಗಿ
ನಾಡು ದೇಶದ ಸೇವಿಗಾಗಿ ॥ಮಡಿಲಲಿ ತಾಯಿಯ॥
ಭಾರತ ಮಾತೆಯ ಶಕ್ತಿಗಾಗಿ
ಭಾರತ ಮಾತೆಯ ತ್ಯಾಗಿಗಾಗಿ ॥ಮಡಿಲಲಿ ತಾಯಿಯ॥
ಮಡಿಲಲಿ ತಾಯಿಯ ಮಗನಾಗಿ
ಬದುಕು ನೀ ಶಾಂತಿಯ ಯೋಗಿಯಾಗಿ ॥ಮಡಿಲಲಿ ತಾಯಿಯ॥

**ಪ್ರಜ್ವಲ್**
ಬಾಪೂಜಿ ಪ್ರೌಢಶಾಲೆ, ಶಿಕಾರಿಪುರ

## ನಮ್ಮ ನಾಡು

ವರ್ಣಿಸುವೆ ನಾ ಕನ್ನಡದ ಸೊಬಗ
ಕನ್ನಡದ ಅಭಿಮಾನಿಯಾಗಿದೆ ನಗುವ ಮಗು
ಪ್ರತಿ ಜನ್ಮದಲ್ಲು ಕರುನಾಡಲ್ಲಿ ಹುಟ್ಟುವೆ
ಕರುನಾಡೆ ನನ್ನ ಮನೆಯಂದು ಮೆಟ್ಟುವೆ
ತುಂಬಿ ಹರಿಯುತ್ತಿದೆ ಜೋಗದ ಸಿರಿ
ಎಷ್ಟು ಸುಂದರವಾಗಿದೆ ಕನ್ನಡ ಕಸ್ತೂರಿ
ಎಲ್ಲಿ ನೋಡಿದರೂ ಹಚ್ಚ ಹಸಿರು
ಕನ್ನಡಕ್ಕಾಗಿ ಇಟ್ಟಿರುವೆ ನನ್ನ ಉಸಿರು
ಪ್ರಕೃತಿಯೆ ದೇವರೆಂದು ನಮ್ಮ ಕುವೆಂಪು
ಅವರಿಂದ ಹಸರುತ್ತಿದೆ ಕನ್ನಡದ ಕಂಪು
ಇಂಪಾಗಿ ಕೇಳುತ್ತಿರುವುದು ಹಕ್ಕಿಗಳ ಧ್ವನಿ
ನಮ್ಮ ನಾಡನ್ನು ಮೆಚ್ಚಿರುವಳು ಮೇದಿನಿ

ಹೊಗಳಲು ಸಾಲುತ್ತಿಲ್ಲ ನನ್ನ ಸಾಲುಗಳು
ಕನ್ನಡಕ್ಕೆ ತಲೆಬಾಗುವವು ಚಂದದ ಹೂವುಗಳು
ಕನ್ನಡಕ್ಕಾಗಿ ಮಾಡಬೇಕು ನಾವು ತ್ಯಾಗ
ಕನ್ನಡವೇ ನಮ್ಮ ಹೃದಯದ ಇನ್ನೊಂದು ಭಾಗ

ಕರುನಾಡಲ್ಲಿ ಹುಟ್ಟಿರುವುದು ನಮ್ಮ ಪುಣ್ಯ
ಇಲ್ಲಿ ಪ್ರತಿಯೊಬ್ಬ ಕನ್ನಡಿಗನು ಚಿನ್ನದ ನಾಣ್ಯ
ತೀರಿಸಲಾಗದೂ ಈ ಮಣ್ಣಿನ ಋಣ
ಸಕ್ಕರೆಯಂತೆ ಸಿಹಿಯಾಗಿದೆ ಕನ್ನಡಿಗರ ಗುಣ.

**ಚೇತನ್ ಎಸ್ ಕೆ**
10ನೇ ತರಗತಿ
ಕುಮದ್ವತಿ ರೆಸಿಡೆನ್ಸಿಯಲ್ ಸೆಂಟ್ರಲ್ ಸ್ಕೂಲ್, ಶಿಕಾರಿಪುರ

## ವಿಶ್ವ ಮಾನವ ಕುವೆಂಪು

ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯವರು
ಪ್ರಕೃತಿಯ ಮಡಿಲಲಿ ಬೆಳೆದವರು
ನಿಷ್ಠೆಯಿಂದ ಬಾಳಿದವರು

ಕನ್ನಡದ ಸಂಸ್ಕೃತಿ ಮೆರೆದವರು
ನಾಡಗೀತೆಯನು ಬರೆದವರು
ಅನೇಕ ಕೃತಿಗಳ ಬರೆದಿಹರು
ನಮ್ಮೆಲ್ಲರ ಶ್ರೀ ಕುವೆಂಪು

ರಾಮಾಯಣ ದರ್ಶನದಿಂದ
ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟವರು
ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾದವರು
ನಮ್ಮೆಲ್ಲರ ಶ್ರೀ ಕುವೆಂಪುರವರು
ವಿಶ್ವ ಮಾನವ ಸಂದೇಶ ನೀಡಿದವರು

– **ಆಕಾಶ್ ಪಿ**
ಬಾಪೂಜಿ ಪ್ರೌಢ ಶಾಲೆ, ಶಿಕಾರಿಪುರ

## ಯೋಧ ನಿನಗ್ಯಾರು ಸಾಟಿ

ದೇಶವ ಕಾಯುವ ಯೋಧನೆ
ನಿನಗ್ಯಾರು ಸಾಟಿ ದೇಶದಲ್ಲಿ
ಕೇಸರಿ, ಬಿಳಿ, ಹಸಿರು
ನಿನ್ನ ಎದೆಯ ಬಡಿತದಲ್ಲಿ ॥ ಯೋಧ॥
ಯದುರಾಳಿ ಎದುರಿಗೆ ಬಂದರೆ
ಎದೆಯ ಕೊಟ್ಟು ನಿಲ್ಲುವೆ
ಚಳಿ ಇರಲಿ, ಬಿಸಿಲಿರಲಿ
ಉಸಿರಾಟವೇ ನಿಲ್ಲಲಿ
ದೇಶಕ್ಕಾಗಿಯೇ ನೀ ನಿಲ್ಲುವೆ ॥ಯೋಧ॥
ಮಡದಿ ಮನೆ ಮಕ್ಕಳನ್ನು
ದೂರದಿಂದ ಕಾಣುವ ದೇಶಕ್ಕಾಗಿ
ಕನಸುಗಳ ಮೂಟೆ ಕಟ್ಟಿ
ದೇಶ ಕಾಯುವ ಆಸೆ ಪಟ್ಟಿ
ದುಡಿಯುವ ಹಗಲಿರುಳು ದೇಶಕ್ಕಾಗಿ ॥ಯೋಧ॥
ತಾಯಿಯ ಗರ್ಭದಲಿ ನಾ ಬೆಚ್ಚಗಿರುವ ಹಾಗೆ
ನೀ ಕಾಯುವೆ ಪ್ರತಿಯೊಂದು ಜೀವಕೆ
ಭೂಮಿಯಲ್ಲಿರೋ ನಿಜವಾದ ರಕ್ಷಕ
ಗಡಿಯಲ್ಲಿ ಕಾಯುತಿರುವ ಸೈನಿಕ
ನಿಮ್ಮಿಂದಲೇ ಈ ದೇಶವು ಸುರಕ್ಷಿತ ॥ಯೋಧ॥
ದೇಶಕ್ಕಾಗಿ ಜೀವಾನೇ ನೀಡಿದ
ಯೋಧನಿಗೆ ನಾ ತಲೆಬಾಗುವೆ
ನಿಸ್ವಾರ್ಥಿಯಾಗಿ ದೇಶಕ್ಕಾಗಿ ದುಡಿದೆ
ದೇಶಪ್ರೇಮದ ಮರೆಯುವುದು ನ್ಯಾಯವೇ ॥ಯೋಧ॥
ನಿಮ್ಮೆಲ್ಲರ ಋಣ ತೀರಿಸಲಾಗದು
ಮತ್ತೆ ಹುಟ್ಟಿ ಬನ್ನಿ ಎಂದು
ಕಾಣದ ದೇವರಲಿ ಪ್ರಾರ್ಥಿಸುವೆ ನಾನು ॥ಯೋಧ॥

**ಲೋಚನಾ ಕೆ**
8ನೇ ತರಗತಿ
ಶ್ರೀ ಚನ್ನಮಲ್ಲಿಕಾರ್ಜುನ ಸ್ಕೂಲ್, ಶಿಕಾರಿಪುರ

## ಭಾಷಾಸಂಘದ ಅಡಿಯಲ್ಲಿ ಕೈಗೊಳ್ಳಲಾದ ಆನ್‌ಲೈನ್ ರಸಪ್ರಶ್ನೆ, ರಾಜ್ಯಮಟ್ಟದ ರಸಪ್ರಶ್ನೆ ಹಾಗೂ ಪ್ರಬಂಧ ಸ್ಪರ್ಧೆ ಕಾರ್ಯಕ್ರಮಗಳ ಲಿಂಕ್‌ಗಳು

1. ಆನ್‌ಲೈನ್ ಕನ್ನಡ ಸಾಮಾನ್ಯ ರಸಪ್ರಶ್ನೆ ಕಾರ್ಯಕ್ರಮ :

https://docs.google.com/forms/d/1fM_b5gqTGNMkLa-NNF_2eBJjtPe1myu3Jud84NLN1I/edit

2. 2020ರ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನಡೆಸಿದ ರಾಜ್ಯಮಟ್ಟದ ರಸಪ್ರಶ್ನೆ ಕಾರ್ಯಕ್ರಮ :

https://docs.google.com/forms/d/1pCYMo0KsJQKbKln3qJHFtMBBOqX9Rm5tXH0tN5sLw_Y/edit

3. ಕುವೆಂಪು ವಿಶ್ವವಿದ್ಯಾಲಯ ಮಟ್ಟದ ಬಿ.ಇಡಿ ಕಾಲೇಜುಗಳ ಪ್ರಶಿಕ್ಷಣಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಪ್ರಬಂಧ ಸ್ಪರ್ಧಾ ಕಾರ್ಯಕ್ರಮ :

https://classroom.google.com/c/MjAyMjY0ODE1NjA4

******************

# ನಾಡಗೀತೆ



ಜಯ್ ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ

ಜಯ್ ಸುಂದರ ನದಿವನಗಳ ನಾಡೆ
ಜಯಹೇ ರಸಋಷಿಗಳ ಬೀಡೆ
ಭೂದೇವಿಯ ಮುಕುಟದ ನವಮಣಿಯೇ
ಗಂಧದ ಚಂದದ ಹೊನ್ನಿನ ಗಣಿಯೇ
ರಾಘವ ಮಧುಸೂಧನರವತರಿಸಿದ ॥ಭಾರತ॥

ಜನನಿಯ ಜೋಗುಳ ವೇದದ ಘೋಷ
ಜನನಿಗೆ ಜೀವವು ನಿನ್ನಾವೇಶ
ಹಸಿರಿನ ಗಿರಿಗಳ ಸಾಲೇ
ನಿನ್ನಯ ಕೊರಳಿನ ಮಾಲೆ
ಕಪಿಲ ಪಂತಜಲಿ ಗೌತಮ ಜಿನನುತ ॥ಭಾರತ॥

ಸರ್ವಜನಾಂಗದ ಶಾಂತಿಯ ತೋಟ
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ ॥ಭಾರತ॥

ಜನಕನ ಹೋಲುವ ದೊರೆಗಳ ಧಾಮ
ಗಾಯಕ ವೈಣಿಕರಾರಾಮ
ಕನ್ನಡ ನುಡಿ ಕುಣಿದಾಡುವ ಗೇಹ
ಕನ್ನಡ ತಾಯಿಯ ಮಕ್ಕಳ ದೇಹ
ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ

– ರಾಷ್ಟ್ರಕವಿ ಕುವೆಂಪು

# ೨೦೧೯ – ೨೦೨೦ ಭಾಷಾ ಸಂಘದ ವಾರ್ಷಿಕ ಚಟುವಟಿಕೆಗಳು



















